ಸಂಪುಟ 01 । ಸಂಚಿಕೆ 193 ಗುರುವಾರ 17 ಸೆಪ್ಟೆಂಬರ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ವಿಶ್ವ ರೋಗಿಗಳ ಸುರಕ್ಷತಾ ದಿನ (World Patient Safety Day) ಪ್ರತಿ ವರ್ಷ ಸೆಪ್ಟೆಂಬರ್ 17ರಂದು ವಿಶ್ವ ರೋಗಿಗಳ ಸುರಕ್ಷತಾ ದಿನವನ್ನು ಆಚರಿಸಲಾಗುತ್ತದೆ. 2026ರ ಘೋಷವಾಕ್ಯ "ಖಚಿಜಿಜ ಛಿಚಿಡಿಜ ಜಿಂಡಿ ಟುಜಿಜ!" ಆಗಿದ್ದು, ಸಾಂಕ್ರಾಮಿಕವಲ್ಲದ ಕಾಯಿಲೆಗಳ (NCDs) ಚಿಕಿತ್ಸೆಯಲ್ಲಿ ಸುರಕ್ಷಿತ ಆರೋಗ್ಯ ಸೇವೆಯ ಮಹತ್ವದ ಮೇಲೆ ಗಮನ ಹರಿಸುತ್ತದೆ.

2)ಹೈದರಾಬಾದ್-ಕರ್ನಾಟಕ ವಿಮೋಚನಾ ದಿನ: ಪ್ರತಿವರ್ಷ ಸೆಪ್ಟೆಂಬರ್ 17 ರಂದು ಆಚರಿಸಲಾಗುತ್ತದೆ1947 ಅಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಆದರೆ ಹೈದರಾಬಾದ್ ಸಂಸ್ಥಾನವು ಭಾರತ ಒಕ್ಕೂಟಕ್ಕೆ ಸೇರಲು ನಿಜಾಮ (ಮೀರ್ ಉಸ್ಮಾನ್ ಅಲಿ ಖಾನ್) ಒಪ್ಪಿರಲಿಲ್ಲ.

ಸುಭಾಷಿತ


ಸಜ್ಜನರ ಕೋಪ ನೀರಿನ ಮೇಲೆ ಗೆರೆ ಇದ್ದಂತೆ. ಕ್ಷಣದಲ್ಲಿಯೇ ಮಾಯವಾಗಿ ಬಿಡುತ್ತದೆ.

-ರಾಮಕೃಷ್ಣ ಪರಮಹಂಸ

ನಾಡಿದ್ದು ರಾಜ್ಯಕ್ಕೆ ಅಮಿತ್ ಶಾ ಭೇಟಿ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರು ರಾಜ್ಯಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದು, ಇದೇ ತಿಂಗಳ 18 ಮತ್ತು 19 ರಂದು ಅವರು ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಅವರ ಆಪ್ತರ ಮೇಲೆ ಇಡಿ ದಾಳಿ ಆಡಳಿತ ಮತ್ತು ವಿಪಕ್ಷಗಳ ನಡುವೆ ಭಾರಿ ವಾಕ್ಸಮರಕ್ಕೆ ಕಾರಣವಾಗಿರುವಾಗಲೇ ಕೇಂದ್ರ ಸಚಿವರ ರಾಜ್ಯ ಭೇಟಿ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.



ಕೇಂದ್ರ ಸಚಿವ ಅಮಿತ್ ಶಾ ಅವರು ಎರಡು ದಿನಗಳ ರಾಜ್ಯ ಭೇಟಿ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಗೂ ಭೇಟಿ ನೀಡುತ್ತಿದ್ದು, ರಾಜ್ಯ ರಾಜಕಾರಣದಲ್ಲಿ ಬೆಳಗಾವಿ ರಾಜಕಾರಣ ತನ್ನದೇ ಆದ ಮಹತ್ವ ಹೊಂದಿದೆ. ಹಾಗಾಗಿ ಅಮಿತ್ ಶಾ ರವರ ಬೆಳಗಾವಿ ಭೇಟಿ ಸಹ ಕುತೂಹಲ ಮೂಡಿಸಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ

2ನೇ ಪುಟಕ್ಕೆ

ಸ್ಥಳೀಯ ಸಂಸ್ಥೆ ಚುನಾವಣೆ : ಕಾಂಗ್ರೆಸ್ ಸಭೆ

❏ ನೈಜ್ಯ ದೆಸೆ ನ್ಯೂಸ್

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲ ಜಿಲ್ಲಾಧ್ಯಕ್ಷರುಗಳ ಸಭೆ ಇಂದು ಕಾಂಗ್ರೆಸ್ ಕಚೇರಿಯಲ್ಲಿ ನಡೆಯಿತು.

ಕಾಂಗ್ರೆಸ್ ಪಕ್ಷಕ್ಕೆ ಇತ್ತೀಚೆಗೆ ಹೊಸದಾಗಿ ನೇಮಕಗೊಂಡಿರುವ ಎಲ್ಲ ಜಿಲ್ಲಾಧ್ಯಕ್ಷರುಗಳ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಪ್ರಮುಖ ನಾಯಕರುಗಳು ಭಾಗಿಯಾಗಿದ್ದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವನ್ನು ಅಣಿಗೊಳಿಸುವ ನಿಟ್ಟಿನಲ್ಲಿ ಈ ಸಭೆಯಲ್ಲಿ ಚರ್ಚೆಗಳು ನಡೆದವು. ಈ ವರ್ಷದ ಅಂತ್ಯದೊಳಗೆ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ



ಚುನಾವಣೆಗಳು ನಡೆಯಲಿದ್ದು, ಈ ಚುನಾವಣೆಗೆ ಈಗಿನಿಂದಲೇ ಪಕ್ಷವನ್ನು ಸಜ್ಜುಗೊಳಿಸಲು ಏನೆಲ್ಲಾ ಕಾರ್ಯಕ್ರಮಗಳನ್ನು ರೂಪಿಸಬೇಕು, ಅಭ್ಯರ್ಥಿಗಳ ಗುರುತಿಸುವಿಕೆ, ಚುನಾವಣಾ ಪ್ರಚಾರ ಸೇರಿದಂತೆ ಚುನಾವಣೆಗೆ ಸಂಬಂಧಿಸಿದ ಎಲ್ಲ ವಿಚಾರಗಳ ಬಗ್ಗೆಯೂ ಕಾಂಗ್ರೆಸ್ ನಾಯಕರು ಜಿಲ್ಲಾಧ್ಯಕ್ಷರುಗಳೊಂದಿಗೆ ಚರ್ಚಿಸಿ, ಮಾರ್ಗದರ್ಶನ ಮಾಡಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ಗೆಲುವುದು ಪಕ್ಷಕ್ಕೆ ಅತ್ಯಂತ ಮಹತ್ವದ್ದಾಗಿದೆ. ಹಾಗಾಗಿ ಜಿಲ್ಲಾಧ್ಯಕ್ಷರುಗಳು ಈಗಿನಿಂದಲೇ ಜಿಲ್ಲಾ ಮಟ್ಟದಲ್ಲಿ ಎಲ್ಲ ನಾಯಕರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಟ್ಟಾಗಿ ಕೆಲಸ ಮಾಡುವಂತೆಯೂ ಈ ಸಭೆಯಲ್ಲಿ ಸೂಚನೆ ನೀಡಲಾಯಿತು.

ಎಸ್‌ಐಆರ್‌ಗೆ ಸಂಬಂಧಿಸಿದಂತೆ ಪಕ್ಷ ನೇಮಕ ಮಾಡಿದ್ದ ವೀಕ್ಷಕರ ಜತೆಯೂ ಕಾಂಗ್ರೆಸ್ ನಾಯಕರುಗಳೂ ಸಭೆ ನಡೆಸಿದ್ದು, ವೀಕ್ಷಕರಿಂದ ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ಮಾಹಿತಿ ಪಡೆದುಕೊಂಡು ಮತದಾರರ ಪಟ್ಟಿಯಿಂದ ಕೈಬಿಟ್ಟಿರುವವರನ್ನು ಸೇರ್ಪಡೆ ಮಾಡುವ ಸಂಬಂಧ ಏನೆಲ್ಲಾ ಪ್ರಕ್ರಿಯೆಗಳನ್ನು ನಡೆಸಬೇಕು ಎಂಬ ಬಗ್ಗೆ ಸೂಚನೆಯನ್ನು ನಾಯಕರು ನೀಡಿದರು.

ಜಾನಪದ ಸಂಗೀತದಿಂದ ಮನಸ್ಸಿಗೆ ಶಾಂತಿ: ಶಿವಾಜಿ ಹಡಪದ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಶ್ರೀ ಕನಕದಾಸ ಗ್ರಾಮೀಣಾಭಿವೃದ್ಧಿ ಸಂಸ್ಥೆ, ತೋಪಲಕಟ್ಟಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಪ್ಪಳ ಇವರ ಸಹಯೋಗದಲ್ಲಿ ಪ್ರಾಯೋಜಿತ ಜಾನಪದ ಸಂಗೀತ ಕಾರ್ಯಕ್ರಮವು ಕುಷ್ಟಗಿ ತಾಲೂಕಿನ ತೋಪಲಕಟ್ಟಿ ಗ್ರಾಮದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಮಾಜಿ ಸೈನಿಕ ಶಿವಾಜಿ ಹಡಪದ ಅವರು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಸಂಗೀತ ಆಲಿಸುವುದರಿಂದ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ದೊರೆಯುತ್ತದೆ.

ಚಿಂತೆಗಳನ್ನು ದೂರ ಮಾಡುವಲ್ಲಿ ಸಂಗೀತ ಪ್ರಮುಖ ಪಾತ್ರ ವಹಿಸುತ್ತದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕನಕದಾಸ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಬಸವಂತಪ್ಪ ಉಪನಾಳ ಮಾತನಾಡಿ, ಭಾರತವು ತನ್ನದೇ ಆದ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಯನ್ನು ಹೊಂದಿದೆ. ಸಾಹಿತ್ಯ, ಸಂಗೀತ ಮತ್ತು ಜಾನಪದ ಕ್ಷೇತ್ರಗಳಲ್ಲಿ ದೇಶದ ಶ್ರೀಮಂತಿಕೆ ಜಗತ್ತಿನ ಗಮನ ಸೆಳೆದಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಲಾವಿದ ಚನ್ನಪ್ಪ ಚಲವಾದಿ, ಗ್ರಾಮೀಣ ಪ್ರದೇಶಗಳಲ್ಲಿ ಜಾನಪದ ಕಲೆ ಮತ್ತು ಸಂಗೀತ ನಶಿಸಿ ಹೋಗದಂತೆ ಉಳಿಸಿ ಬೆಳೆಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಾವಿದ-ರಿಗೆ ಪ್ರೋತ್ಸಾಹ ನೀಡುತ್ತಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮಹಾಂತಗೌಡ ರಾಮನಗೌಡ ಪಾಟೀಲ, ಕಳಕನಗೌಡ ಪೊಲೀಸ್ ಪಾಟೀಲ, ಮಲ್ಲಪ್ಪ ಲೋಕಪ್ಪ, ಮರಿಯಪ್ಪ ಯಲ್ಲಪ್ಪ ಕುರಿ ಹಾಗೂ ಕಳಕನಗೌಡ ಗೌಡ್ರ ಉಪಸ್ಥಿತರಿದ್ದರು. ನಂತರ ಚನ್ನಪ್ಪ ಚಲವಾದಿ ಹಾಗೂ ಸಂಗಡಿಗರು ಜಾನಪದ ಸಂಗೀತ ಕಾರ್ಯಕ್ರಮ



ನಡೆಸಿಕೊಟ್ಟರು. ದೇವೇಂದ್ರಪ್ಪ ಕಮ್ಮಾರ (ಕ್ಯಾದಿಗುಪ್ಪ) ತಬಲ ಸಾಥ್ ನೀಡಿದರು. ಶರಣಗೌಡ ಮಾಲಿ ಪಾಟೀಲ (ಟಕ್ಕಳಕಿ) ಹಾಗೂ ದೊಡ್ಡಾಟದ ಮಾಸ್ತರ್ ಶರಣಪ್ಪ ಬನ್ನಿಗೋಳ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಇದೇ ಸಂದರ್ಭದಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಧನೆಗಾಗಿ ನಾಡಪ್ರಭು ಕೆಂಪೇಗೌಡ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ನಿಂಗಪ್ಪ ವೀ. ಜಿಗೇರಿ, ಕಡೇಕೊಪ್ಪ ಅವರನ್ನು ಆಯೋಜಕರು ಹಾಗೂ ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಗ್ರಾಮಸ್ಥರು, ಕಲಾಭಿಮಾನಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಮುದ್ದಟನೂರು ಗ್ರಾಮದಲ್ಲಿ ಸೌಹಾರ್ದಯುತ 'ಮೀಲಾದ್ ಕ್ಯಾಂಪೇನ್' ಸಮಾರೋಪ

❏ ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ / ಮುದ್ದಟನೂರು : ಪೈಗಂಬರ್ ಮುಹಮ್ಮದ್ ಅವರ ಜನ್ಮದಿನಾಚರಣೆ ಪ್ರಯುಕ್ತ ತಾಲೂಕಿನ ಮುದ್ದಟನೂರು ಗ್ರಾಮದ ಖುರ್ರತ್ತುಸ್ಸಾದಾತ್ ಸುನ್ನೀ ಮದರಸ ಹಾಗೂ ಜಾಮಿಯಾ ಮಸೀದಿ ವತಿಯಿಂದ ಆಯೋಜಿಸಲಾಗಿದ್ದ ಒಂದು ತಿಂಗಳ ಅವಧಿಯ 'ಅಲ್ಫಾಫುಲ್ ತಾಜ್ದಾರ್ ಮೀಲಾದ್ ಕ್ಯಾಂಪೇನ್' ಯಶಸ್ವಿಯಾಗಿ ಸಮಾರೋಪಗೊಂಡಿತು.

ಆಯೋಜಕರಾದ ಆಮಿರ್ ಅಶ್‌ಅರೀ ಬನ್ನೂರು ಮಾತನಾಡಿ, "ಪೈಗಂಬರ್ ಮುಹಮ್ಮದ್ ಅವರ ಜೀವನ ಮತ್ತು ಬೋಧನೆಗಳನ್ನು ಸಾರ್ವಜನಿಕ-ರಿಗೆ ಪರಿಚಯಿಸುವ ಸದಾಶಯದೊಂದಿಗೆ



ಗ್ರಾಮದ ಪ್ರತಿ ಮನೆಗಳಲ್ಲೂ 'ಹರ್ ಘರ್ ಮೌಲಿದ್' ಕಾರ್ಯಕ್ರಮ ನಡೆಸಲಾಯಿತು. ಅಲ್ಲದೆ, ವಿದ್ಯಾರ್ಥಿಗಳಲ್ಲಿ ಸಾಹಿತಿಕ ಮತ್ತು ಸಾಂಸ್ಕೃತಿಕ ಪ್ರತಿಭೆಗಳನ್ನು ಉತ್ತೇಜಿಸಲು 'ನೂರೇ ಫರ್ಖುಲ್ ಮೀಲಾದ್ ಫೆಸ್ಟ್' ಹಾಗೂ ಅನ್ನದಾನವನ್ನು ಪ್ರೋತ್ಸಾಹಿಸಿದ ಪೈಗಂಬರರ ನೆನಪಿನಲ್ಲಿ 'ಲಂಗರೇ ತಾಜ್ದಾರ್' ಸಾರ್ವಜನಿಕ ಅನ್ನಸಂತರ್ಪಣೆ ಸೇರಿದಂತೆ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ" ಎಂದು ವಿವರಿಸಿದರು.

ಎರಡು ದಿನಗಳ ಕಾಲ ನಡೆದ ಈ ಭವ್ಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಯ್ಯದ್ ಮನ್ಸೂರ್ ಅಹ್ಮದ್ ತಂಜಲ್ ಕೌಡಳ್ಳಿ, ಆಸಿಫ್ ರಿಫಾಯಿ ಸಿರಿಗೇರಿ, ಸಿದ್ದೀಕ್ ಸಖಾಫಿ ಬಳ್ಳಾರಿ, ಶಹೀದ್ ಮಲ್ಲರಿ, ಸಫ್ವಾನ್ ಹನೀಫಿ ಅಶ್‌ಅರೀ, ಜೀಲಾನ್ ಸಾಬ್ ಬಡಿಗೇರಿ ಹಾಗೂ ಇಮ್ತಿಯಾಜ್ ಕಂಪ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮುದ್ದಟನೂರು ಗ್ರಾಮದ ಸರ್ವಧರ್ಮೀಯರು, ಊರಿನ ಹಿರಿಯರು, ಯುವಕರು ಹಾಗೂ ಮದರಸದ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಸಾಕಿದ ಅಥವಾ ಬೀದಿ ನಾಯಿ ಕಡಿದ ಸಂದರ್ಭ ತಪ್ಪದೆ ರೇಬಿಸ್ ಚುಚ್ಚುಮದ್ದು ಪಡೆಯಲು ಜಾಗೃತಿ.

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ನಾಯಿ ಕಡಿದ ಸಂದರ್ಭದಲ್ಲಿ ಗಾಯಕ್ಕೆ ಏನನ್ನೂ ಹಚ್ಚದೆ ಸಾಬೂನು ಹಾಗೂ ಸ್ವಚ್ಛವಾದ ನೀರಿನಿಂದ ನಾಯಿ ಕಚ್ಚಿದ ಸ್ಥಳವನ್ನು ತೊಳೆದು ತಕ್ಷಣವೇ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಬೇಟಿ ನೀಡಿ ರೇಬೀಸ್ ನಿರೋಧಕ ಚುಚ್ಚುಮದ್ದು ಪಡೆಯಲು ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ತಿಳಿಸಿದರು.

ನಾಯಿ ಕಡಿತ ಪ್ರಕರಣದ ಹಿನ್ನಲೆ ರಾಯಚೂರು ನಗರದ ಎಲ್‌ಬಿಎಸ್ ನಗರದ ಪರಿಮಳ ಲೆಔಟ್ ನಲ್ಲಿ ಜನತೆಗೆ ಜಾಗೃತಿ ನೀಡಿ ಮಾತನಾಡುತ್ತಾ, ನಾಯಿಗಳಿಗೆ ಎಲ್ಲೆಂದರಲ್ಲಿ ಆಹಾರ ಹಾಕುವ



ಮುಖ್ಯವಾಗಿ ಮಾಂಸಹಾರಿ ತ್ಯಾಜ್ಯ ಪದಾರ್ಥಗಳನ್ನು ರಸ್ತೆ ಬದಿ ಹಾಕಬಾರದು, ಚಿಕ್ಕಮಕ್ಕಳನ್ನು ಮನೆಯ ಹೊರಗೆ ಆಟ ಆಡಲು ಕಳುಹಿಸುವಾಗ ಜಾಗ್ರತಿ ವಹಿಸಿ ಎಂದರು. ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ ಹಾಗೂ ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ವಸಂತಕುಮಾರಿ ಮಾಹಿತಿ ನೀಡುತ್ತಾ, ನಾಯಿಯು ಕೇವಲ ಕಡಿದರೆ ಮಾತ್ರವಲ್ಲದೆ, ಉಗುರಿನಿಂದ ಗಿರಿದರೆ, ದೇಹದ ಮೇಲಿನ ಗಾಯಗಳನ್ನು ನೆಕ್ಕಿದರೂ ಸಹ ತಪ್ಪದೆ ರೇಬೀಸ್ ನಿರೋಧಕ ಚುಚ್ಚುಮದ್ದು ಪಡೆಯಲು ಹಾಗೂ ಮನೆಯಲ್ಲಿ ಸಾಕಿದ ನಾಯಿಗಳಿದ್ದರೆ ರೇಬೀಸ್ ನಿರೋಧಕ ಚುಚ್ಚುಮದ್ದು ಹಾಕಿಸಲು ತಿಳಿಸದರು.

ಈ ಸಂಧರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ಪುಂಡಲೀಕ ಗಂಜಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸುರೇಶ್, ಎಮ್-ಎಲ್‌ಡಬ್ಲ್ಯು ಬಿಬ್ಬಿ ಬಾಚಯ್ಯ, ಆಶಾ ಕಾರ್ಯಕರ್ತೆ ಗಂಗಿಮಾಳಮ್ಮ, ತಾಯಂದಿರು ಉಪಸ್ಥಿತರಿದ್ದರು.

ಕಾರುಣ್ಯಾಶ್ರಮದಲ್ಲಿ ಸಯ್ಯದ್ ಹಾರೂನ್ ಸಾಹೇಬ್ ಜಾಗೀರ್ ದಾರ್ ಅವರ ಅರ್ಥಪೂರ್ಣ ಜನ್ಮದಿನ ಆಚರಣೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರ: ಸಯ್ಯದ್ ಹಾರೂನ್ ಸಾಹೇಬ್ ಜಾಗೀರ್ ದಾರ್ ಸ್ನೇಹ ಬಳಗ ಸಿಂಧನೂರು ವತಿಯಿಂದ ಪ್ರಥಮ ದರ್ಜೆ ಗುತ್ತೇದಾರರು ಹಾಗೂ ಕಾಂಗ್ರೆಸ್ ಮುಖಂಡರು ಮತ್ತು ಸಮಾಜ ಸೇವಕರಾದ ಸಯ್ಯದ್ ಹಾರೂನ್ ಸಾಹೇಬ್ ಜಾಗೀರ್ ದಾರ್ ಅವರ 48ನೇ ವರ್ಷದ ಜನ್ಮದಿನ ಸಮಾರಂಭ ಕಾರ್ಯಕ್ರಮವು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ.

ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಖಾಜಾ ಬನ್ನಿಗನೂರು ಇವರ ನೇತೃತ್ವದಲ್ಲಿ" ಭಾವೈಕ್ಯತೆಯ ಸಂಸ್ಕಾರ " ಎನ್ನುವ ವಿಶೇಷ ಕಾರ್ಯಕ್ರಮದಡಿಯಲ್ಲಿ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥ-ಪೂರ್ಣವಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಸಯ್ಯದ್ ಹಾರೂನ್ ಸಾಹೇಬ್ ಜಾಗೀರ್ ದಾರ್



ಇವರನ್ನು ಆಶ್ರಮದ ವತಿಯಿಂದ ಹಾಗೂ ಹಲವಾರು ಸಂಘ ಸಂಸ್ಥೆಗಳ ಮತ್ತು ಕರವೇ ಸಂಘಟನೆಗಳ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಯ್ಯದ್ ಹಾರೂನ್ ಸಾಹೇಬ್ ಜಾಗೀರ್ ದಾರ್ ಮಾತನಾಡಿ ಕರುಣೆಯ ಈ ಕಾರುಣ್ಯ ಕುಟುಂಬದ ಎಲ್ಲಾ ಹಿರಿಯರುಗಳು ಹಾಗೂ ಸಹೋದರ ಸಹೋದರಿಯರ ಸಮಾನರಾದ ಬುದ್ಧಿಮಾಂದ್ಯ ದೇವರ ಸ್ವರೂಪಿಗಳ ಆಶೀರ್ವಾದ ನನ್ನ ಮೇಲಿರಲಿ ಸಮಾಜದಲ್ಲಿನ ಹಿರಿಯರನ್ನು ಗೌರವಿಸುವಂತಹ ಪೂಜಿಸುವಂತಹ ಕಾರ್ಯವನ್ನು ಕಾರುಣ್ಯಾಶ್ರಮ ಮಾಡುತ್ತಾ ಬಂದಿದೆ. ರಾಜ್ಯಮಟ್ಟದಲ್ಲಿ ಕಾರುಣ್ಯ ಆಶ್ರಮವು ಅನಾಥಕ್ಷೇತ್ರದಲ್ಲಿ ತನ್ನದೇ ಆದಂತಹ ವರ್ಚಸ್ಸು ಮೂಡಿಸಿ ನಮ್ಮ ಸಿಂಧನೂರಿನ ಘನತೆ ಗೌರವವನ್ನು ಹೆಚ್ಚಿಸಿದೆ. ಈ ಸಂಸ್ಥೆಗೆ ನಮ್ಮಿಂದ ನಿರಂತರ ಸಹಾಯ ಸಹಕಾರವಿರುತ್ತದೆ. ಕಾರುಣ್ಯಾಶ್ರಮದ ಸೇವೆಯಲ್ಲಿ ನಾವೆಲ್ಲರೂ ಸದಾ ಕಾಲ ಜೊತೆಗಿರುತ್ತೇವೆ. ಆಶ್ರಮಕ್ಕೆ ಸ್ವಂತ ಜಾಗ ಹಾಗೂ ಅನುದಾನ ಕಲ್ಪಿಸಿ ಕೊಡುವಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇಂದಿನ ನನ್ನ ಈ ಜನ್ಮ ಸಾರ್ಥಕ ದಿನದಂದು ಹರಸಿ ಹಾರೈಸಿ ಶುಭ ಕೋರಿರುವ ಎಲ್ಲರಿಗೂ ಧನ್ಯವಾದಗಳು ಎಂದು ಮಾತನಾಡಿದರು. ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಖಾಜಾ ಬನ್ನಿಗನೂರು ಮಾತನಾಡಿ ನಮ್ಮ ಹಾರೂನ್ ಧಣಿಯವರು ಸರ್ವಧರ್ಮದ ಸರ್ವಣಿಯರ ಪ್ರೀತಿ ವಿಶ್ವಾಸ ಗಳಿಸುವ ಮೂಲಕ ನಮ್ಮ ಸಿಂಧನೂ-ರಿನ ಜನತೆಯ ಪ್ರೀತಿಗೆ ಪಾತ್ರರಾಗಿದ್ದಾರೆ.

ಇವರ ಆದರ್ಶ ವ್ಯಕ್ತಿತ್ವ ಮಾರ್ಗದರ್ಶನವೇ ನಮ್ಮ ಹಲವಾರು ಸಮಾಜ ಸೇವೆಗಳಿಗೆ ಸ್ಪೂರ್ತಿಯಾಗಿದೆ. ಇಂದಿನ ಅವರ ಜನ್ಮದಿನ ಈ ಕಾರುಣ್ಯ ಆಶ್ರಮದಲ್ಲಿ ದೇವರ ಮಕ್ಕಳ ಆಶೀರ್ವಾದದೊಂದಿಗೆ ಅರ್ಥಪೂರ್ಣವಾಗಿ ನೆರವೇರಿಸಿರುವುದು. ಇಂದು ಅವರ ಜನ್ಮ ಸಾರ್ಥ-ಕ ದಿನವಾಗಿದೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಯ್ಯದ್ ಮಗ್ದುಮ್ ಅಲಿ. ಎಂ. ಡಿ. ರಫೀ. ಮಹಮ್ಮದ್ ರಫಿ. ಮಹಿಬೂಬ್ ಸಾಬ್, ಮುಳ್ಳೂರು. ಎಂ. ಡಿ. ಮೂಸಾ. ನಾಗಪ್ಪ ಗೋಮರ್ಸಿ. ರಾಜ ಸಾಬ್ ಗಾಂಧಿನಗರ ರಾಜಾಸಾಬ್ ಗಾಂಧಿನಗರ ಕರವೇ ತಾಲೂಕಾಧ್ಯಕ್ಷರು. ಬುಡಾನ್ ಸಾಬ್ ಕರವೇ. ರಫೀ ಕುನ್ನಟಗಿ. ಇಮ್ತಿಯಾಜ್. ನಬಿಸಾಬ್. ನಿಸ್ಸಾರ್ ಅಹ್ಮದ್. ಮಹಿಬೂಬ್ ಮೆಕಾನಿಕ್. ಮಹಿಬೂಬ್ ಯಾಪಲಪರ್ವಿ. ತನ್ ವೀರ್ ತಿಪ್ಪನಹಟ್ಟಿ. ಮಂಜು ಮಂಟಾ. ಮಹಿಬೂಬ್ ಸಾಬ್ ಕುನ್ನಟಗಿ. ಶಿವಗ್ಯಾನಪ್ಪ ನೇಗಿಲಿ.ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಸದಸ್ಯರಾದ ಸುಜಾತ ಹಿರೇಮಠ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಸಯ್ಯದ್ ಹಾರೂನ್ ಸಾಹೇಬ್ ಜಾಗೀರ್ ದಾರ್ ಅವರ ಅಪಾರ ಸ್ನೇಹಿತರು ಅಭಿಮಾನಿಗಳು ಭಾಗವಹಿಸಿದ್ದರು.

ಸಾಹಿತ್ಯ ಸಿಂಚನ

ಕಳೆದುಹೋದ ನಗುವಿನ ಹುಡುಕಾಟ

ಒಮ್ಮೆ ತುಟಿಗಳ ಮೇಲೆ ಅರಳಿದ್ದ ನಗು,
ಇಂದು ಮೌನದೊಳಗೆ ಮರೆಯಾಗಿದೆ ಏಕೆ?
ಕನಸುಗಳ ದಾರಿಯಲ್ಲಿ ನಡೆದ ಹೆಜ್ಜೆಗಳು,
ಎಲ್ಲೋ ನಿಂತುಹೋದವು ನೆನಪಾಗಿ ಏಕೆ?

ಕನ್ನಡಿಯ ಮುಂದೆ ನಿಂತು ನೋಡಿದಾಗ,
ಮುಖವಿದೆ, ಆದರೆ ನಗುವಿಲ್ಲ;
ಕಣ್ಣುಗಳೊಳಗೆ ಸಾವಿರ ಮಾತುಗಳಿವೆ,
ಅವು ಹೇಳಲು ಮಾತ್ರ ಧೈರ್ಯವಿಲ್ಲ.

ಹಳೆಯ ನೆನಪುಗಳ ಪುಟ ತೆರೆದಾಗ,
ಆ ನಗುವಿನ ನೆರಳು ಕಾಣುತ್ತದೆ;
ಕಳೆದುಹೋದ ಕ್ಷಣಗಳ ಹಿಂದೆ ಓಡಿದರೂ,
ಅದು ಕೈಗೆ ಸಿಗದೆ ದೂರ ಸರಿಯುತ್ತದೆ.

ನೋವಿನ ಮೋಡಗಳು ಕವಿದರೂ ಮನದಲ್ಲಿ,
ಒಂದು ಸಣ್ಣ ಬೆಳಕು ಉಳಿದಿದೆ;
ನಾಳೆಯ ಹೊಸ ಕನಸುಗಳ ನಡುವೆ,
ನಗು ಮತ್ತೆ ಮರಳುವ ಭರವಸೆ ಮೂಡಿದೆ.

ಕಳೆದುಹೋದ ನಗುವನ್ನು ಹುಡುಕುತ್ತಾ,
ನನ್ನೊಳಗಿನ ನನ್ನನ್ನೇ ಕಂಡೆ;
ಜೀವನದ ದಾರಿಯಲ್ಲಿ ನಿಧಾನವಾಗಿ ನಡೆದು,
ಮತ್ತೆ ನಗಲು ಕಲಿಯುವೆನೆಂದು ತಿಳಿದೆ.

ಶ್ರೀ ಸಂಗಮೇಶ್ವರ ಪದವಿ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕದಿಂದ 'ವಿಕಸಿತ ಭಾರತ' ರಸಪ್ರಶ್ನೆ ಸ್ಪರ್ಧೆ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣದ ಶ್ರೀ ಸಂಗಮೇಶ್ವರ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (NSS) ಘಟಕದ ವತಿಯಿಂದ ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ 'ಮೈ ಭಾರತ್' (MYBharat) ಪೋರ್ಟಲ್‌ನಲ್ಲಿ



"ವಿಕಸಿತ ಭಾರತ ಯಂಗ್ ಲೀಡರ್ಸ್ ಡೈಲಾಗ್ (VBYLD) 2027" ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾಲೇಜಿನ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಆನ್‌ಲೈನ್ ಮೂಲಕ ರಸಪ್ರಶ್ನೆ ಪೂರ್ಣಗೊಳಿಸಿ ಸಚಿವಾಲಯದಿಂದ ಭಾಗವಹಿಸುವಿಕೆ ಪ್ರಮಾಣಪತ್ರಗಳನ್ನು (Certificate of Participation) ಪಡೆದುಕೊಂಡರು. ಯುವಜನರಲ್ಲಿ ದೇಶದ ಅಭಿವೃದ್ಧಿ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವುದು ಈ ಸ್ಪರ್ಧೆಯ ಮುಖ್ಯ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಎನ್‌ಎಸ್-ಎಸ್ ಕಾರ್ಯಕ್ರಮಾಧಿಕಾರಿಗಳು, ಉಪನ್ಯಾಸಕ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು

1ನೇ ಪುಟದಿಂದ....

ಅವರು ಎರಡು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ರಾಜ್ಯಕ್ಕೆ ಭೇಟಿ ನೀಡುತ್ತಿದ್ದು, ಈ ಸಂದರ್ಭದಲ್ಲಿ ಅವರು ಬೆಳಗಾವಿಯಲ್ಲಿ ಪಕ್ಷ ಸಂಘಟನೆ ಮತ್ತಿತರ ವಿಚಾರಗಳ ಬಗ್ಗೆಯೂ ಬಿಜೆಪಿ ಮುಖಂಡರ ಜತೆ ಚರ್ಚೆ ನಡೆಸುವರು ಎಂದು ಹೇಳಲಾಗಿದೆ. ಈ ತಿಂಗಳ 18 ರಂದು ರಾತ್ರಿ ದೆಹಲಿಯಿಂದ ನೇರವಾಗಿ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಅಮಿತ್ ಶಾ ಅವರು, ಅಂ-ದು ಅಲ್ಲಿಯೇ ವಾಸ್ತವ್ಯ ಹೂಡಲಿದ್ದು, ಮರು ದಿನಗಳ ಬೆಳಗ್ಗೆ ಅಂದರೆ ಸೆ. 19 ರಂದು ಹುಬ್ಬಳ್ಳಿಯ ಗಬ್ಬೂರು ಬೈಪಾಸ್ ಬಳಿ ಕೆಎಲ್‌ಇ ಸಂಸ್ಥೆ ನೂತನವಾಗಿ ನಿರ್ಮಿಸಲಿರುವ 1500 ಹಾಸಿಗೆಗಳ ಹೈಟೆಕ್ ಆಸ್ಪತ್ರೆ ಮತ್ತು ನೂತನ ವೈದ್ಯಕೀಯ ಮಹಾವಿದ್ಯಾಲಯ ಕಟ್ಟಡವನ್ನು ಲೋಕಾರ್ಪಣೆ ಮಾಡುವರು ಈ ಕಾರ್ಯಕ್ರಮದ ನಂತರ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಯಕ್ಸಾಂಬಾ ಗ್ರಾಮದಲ್ಲಿ ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಮಾಜಿ ಸಂಸದ ಅಣ್ಣಾ ಸಾಹೇಬ್ ಜೊಲ್ಲೆ ಒಡೆತನದ ಬೀರೇಶ್ವರ ಕೋ- ಆಪರೇಟಿವ್ ಕ್ರೆಡಿಟ್ ಸೊಸೈಟಿಯ ನೂತನ ಕಟ್ಟಡ ಉದ್ಘಾಟಿಸುವರು. ಈ ಸಂದರ್ಭದಲ್ಲಿ ಅಮಿತ್ ಶಾ ಅವರು ಬೆಳಗಾವಿ ಸೇರಿದಂತೆ ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷ ಸಂಘಟನೆ ಬಗ್ಗೆ ಬಿಜೆಪಿ ನಾಯಕರೊಂದಿಗೆ ಚರ್ಚೆ ನಡೆಸುವರು ಎಂದು ಹೇಳಲಾಗಿದೆ.

ಶಿಕ್ಷಣಕ್ಕೆ ಬಿಜೆಪಿ ಒತ್ತು; ಕಾಂಗ್ರೆಸ್ ಅವಧಿಯಲ್ಲಿ ಶೈಕ್ಷಣಿಕ ವ್ಯವಸ್ಥೆ ಕುಸಿತ: ಎಂಎಲ್‌ಸಿ ರವಿಕುಮಾರ್

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಶಿಕ್ಷಣ ಕ್ಷೇತ್ರಕ್ಕೆ ಬಿಜೆಪಿ ಹೆಚ್ಚಿನ ಒತ್ತು ನೀಡುತ್ತಾ ಬಂದಿದೆ. ಆದರೆ, ಈಗಿನ ಕಾಂಗ್ರೆಸ್ ಆಳ್ವಿಕೆಯಲ್ಲಿ ರಾಜ್ಯದಲ್ಲಿ ಶಿಕ್ಷಣದ ಗುಣಮಟ್ಟ ಕಳಪೆಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ರವಿಕುಮಾರ ಹೇಳಿದರು.

ಪಟ್ಟಣದ ಬ್ರೈಟ್‌ವೇ ಶಾಲೆಯಲ್ಲಿ ಈಶಾನ್ಯ ಶಿಕ್ಷಕರ ಮತ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಹಿನ್ನಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಶಿಕ್ಷಕರ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಎಂಎಲ್ಸಿ ಚುನಾವಣೆಗಳು ಅಕ್ಟೋಬರ್ ಕೊನೆವಾರದಲ್ಲಿ ನಡೆಯುವ ಸಾಧ್ಯತೆ ಇದೆ. ಕಂಪ್ಲಿ 213, ಕುರುಗೋಡು 120 ಸೇರಿದಂತೆ ಬಳ್ಳಾರಿ ಜಿಲ್ಲೆಯಲ್ಲಿ 3302 ಶಿಕ್ಷಕ ಮತದಾರರಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವ ಜೊತೆಗೆ ಅನುದಾನ ಮತ್ತು ನೇಮಕಾತಿಯನ್ನು ಬಿಜೆಪಿ ಮಾಡಿತ್ತು. ಮತ್ತು ಶಿಕ್ಷಣಕ್ಕೆ ಒತ್ತು ನೀಡಿದೆ. ಈಗ ಶಿಕ್ಷಕರ ಸಮಸ್ಯೆಗಳಿಗೆ



ಸರಿಯಾಗಿ ಸ್ಪಂದನೆ ಇಲ್ಲದಂತಾಗಿದೆ. ಶಿಕ್ಷಕರ ನೇಮಕ ಗಂಭೀರವಾಗಿದೆ.

ಇಂದಿನ ದಿನಮಾನದಲ್ಲಿ ಶಿಕ್ಷಣದ ಗುಣಮಟ್ಟ ಕಳಪೆಯಾಗುತ್ತಿದೆ. ನಾಲ್ಕು ಬಾರಿ ಈಶಾನ್ಯ ಶಿಕ್ಷಕರ ಮತ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರಾಗಿ ಶಶೀಲ್ ನಮೋಶಿ ರವರು ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಶಿಕ್ಷಕರು ಮುಂಬರುವ ಈಶಾನ್ಯ ಶಿಕ್ಷಕರ ಮತ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಶಶೀಲ್ ಜಿ.ನಮೋಶಿ ಅವರನ್ನು ಮತ್ತೊಮ್ಮೆ ಗೆಲ್ಲಿಸಲು ಮತದಾರರ ಬಳಿ ತೆರಳಬೇಕಾಗಿದೆ ಎಂದರು. ವಿಧಾನ ಪರಿಷತ್ ಮಾಜಿ ಸದಸ್ಯ ಮನೋಹರ ಮಸ್ಕಿ ಮಾತನಾಡಿ, ಬಳ್ಳಾರಿ ಜಿಲ್ಲಾ ಪ್ರವಾಸದಲ್ಲಿದ್ದೇವೆ. ಪರಿಸರ, ಸಮುದಾಯದಲ್ಲಿ ನಾಯಕತ್ವಯೊಂದಿಗೆ ವ್ಯಕ್ತಿತ್ವ ಬೆಳೆಯಲು ಸಾಧ್ಯ. ಚುನಾವಣೆ ಎಂಬ ಪ್ರಜಾಪ್ರಭುತ್ವ ಹಬ್ಬದಲ್ಲಿ ಶಿಕ್ಷಕರು ಉತ್ತಮ ಅವಕಾಶಗಳಾಗಿ ಬಳಸಿಕೊಳ್ಳಿ. ನಿಮ್ಮ ಬೆಳವಣಿಗೆ ಈ ಚುನಾವಣೆ ಅನುಕೂಲವಾಗಬೇಕು ಎಂದರು.

ಬಿಜೆಪಿಯ ಜಿಲ್ಲಾ ಉಪಾಧ್ಯಕ್ಷ ಅಳ್ಳಳ್ಳಿ ವಿರೇಶ ಪ್ರಾಸ್ತಾವಿಕವಾಗಿ ಮಾತನಾಡಿ, ಶಶೀಲ್ ನಮೋಶಿ ಅವರು ಸಾಕಷ್ಟು ಸೇವಾ ಕಾರ್ಯಗಳೊಂದಿಗೆ ಈಶಾನ್ಯ ಶಿಕ್ಷಕರ ಮನಗೆದ್ದಿದ್ದಾರೆ. ದೇಶದ ಜನರ ಕಾಳಜಿ ಸೇ-ರಿದಂತೆ ದೇಶದ ಅಭಿವೃದ್ಧಿಯಲ್ಲಿ ಬಿಜೆಪಿ ಪಾತ್ರ ದೊಡ್ಡದಿದೆ. ವಿಧಾನ ಪರಿಷತ್ನಲ್ಲಿ ಅನೇಕ ಬಾರಿ ಜನರಧ್ವನಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಅಡವಿಸ್ವಾಮಿ, ಎಸ್.ಎಂ.ನಾಗರಾಜ, ಟಿ.ವಿ.ಸುದರ್ಶನರೆಡ್ಡಿ, ಶರಣಕುಮಾರ, ಯ. ಶಿವರಾಜ, ಗೊರ್ತಿ ಶ್ರೀನಿವಾಸ್, ಕಟ್ಟೆ ವಿಶ್ವನಾಥ, ಸೇರಿದಂತೆ ಶಿಕ್ಷಕರು ಇದ್ದರು.


ತಾಲೂಕಿನೆಲ್ಲೆಡೆ ಗಣಪನ ಸಂಭ್ರಮ : ಆಕರ್ಷಿಸಿದ ವೈವಿಧ್ಯಮಯ ಗಣಪಗಳು : ಗಲ್ಲಿಗಲ್ಲಿಗಳಲ್ಲಿ ಪ್ರತಿಷ್ಠಾಪನೆ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಜೈ ಗಣಪ ಜೈ ಜೈ ಗಣಪ ಎನ್ನುತ್ತಾ ಸಂಭ್ರಮದ ಘೋಷಣೆಗಳೊಂದಿಗೆ ತಾಷರಾಂಡೋಲ್, ಪಟಾಕಿ ಸದ್ದಿನ ಮೂಲಕ ಗಣಪತಿ ಮಂಡಳಿಯವರು ವೈವಿಧ್ಯಮಯ ಗಣಪ ಮೂರ್ತಿಗಳ ಭವ್ಯ ಮೆರವಣಿಗೆ ಸ್ವಾಗತಮಾಡಿ, ಅದ್ದೂರಿಯಾಗಿ ಬರ ಮಾಡಿಕೊಂಡರು.

ಗಣೇಶ ಚತುರ್ಥಿ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ವೈವಿಧ್ಯಮಯ ಗಣಪನ ಮೂರ್ತಿಗಳನ್ನು ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿ ಪ್ರತಿಷ್ಠಾಪಿಸಲಾಗಿದೆ. ಗೋಲ್ಡನ್ ಗಣಪ, ಮಹಾರಾಜ, ಛತ್ರಪತಿ, ಸೌದತ್ತಿ ಯಲ್ಲಮ್ಮ ದೇವಿ ಹೊತ್ತ ಗಣಪತಿ, ಹೀಗೆ ನಾನಾ ಅಪಕರ್ಷಣೆಯ ವಿಘ್ನನಿವಾರಕನನ್ನು ಕೂರಿಸಲಾಗಿದೆ. ವರ್ಷಕ್ಕೊಮ್ಮೆ ಆಗಮಿಸುವ ಗಣಪತಿಯನ್ನು ಯುವಕರ ಮಂಡಳಿಯವರು ವಿಜೃಂಭಣೆಯಿಂದ ಪ್ರತಿಷ್ಠಾಪಿಸಿ, ಸಂಭ್ರಮದಿಂದ ಪೂಜಿಸಿದರು.

ಪಟ್ಟಣದ ಮುಖ್ಯರಸ್ತೆಯ ತೇ-ರಿನ ಮನೆ ಬಳಿಯಲ್ಲಿ ವಿನಾಯಕ ಯುವಕ ಮಂಡಳಿಯಿಂದ 37ನೇ ವಾರ್ಷಿಕೋತ್ಸವದ



ನಿಮಿತ್ತ ಪರಮೇಶ್ವರನ ಅವತಾರದಲ್ಲಿ ಮೂಡಿ ಬಂದ ಗಣಪತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿನ ವಾಲ್ಮೀಕಿ ವೃತ್ತದಲ್ಲಿ ಸಕ್ಕರೆ ಕಾರ್ಖಾನೆ ಅಭಿ ಯುವಕರ ಬಾಯ್ಸ್ ವತಿಯಿಂದ ಮಹಾರಾಜ ಗಣಪತಿ ಪ್ರತಿಷ್ಠಾಪಿಸಿದೆ. ಈ ವೇಳೆ ಯುವಕರಾದ ವಿಷ್ಣು, ಬಾಬು, ಅಶೋಕ, ವಾಸು, ಮಹಂತೇಶ ಇದ್ದರು. ಸ್ಥಳೀಯ ಜೆಸ್ಕಾಂ ಕಛೇರಿ ಆವರಣದಲ್ಲಿ ಮಹಾರಾಜ ಗಣಪನನ್ನು ಕೂರಿಸಲಾಗಿದೆ.

ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ಲಯನ್ಸ್ ಗ್ರೂಪ್ ವತಿಯಿಂದ ಶ್ರೀಕೃಷ್ಣನ ರೂಪದ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಇಲ್ಲಿನ ಪುರಸಭೆ ಕಛೇರಿಯಲ್ಲಿ ಚಿಕ್ಕದಾದರೂ ಚೊಕ್ಕದಾಗಿದೆ ಎನ್ನುವಂತೆ ವಿವಿಧ ಅಲಂಕಾರದಲ್ಲಿ ಗಣಪತಿ ಇರಿಸಲಾಗಿದೆ. ಗಂಗಾನಗರದ ಹಳೇ ಕೆನರಾ ಬ್ಯಾಂಕ್ ಬಳಿಯ ಮುಖ್ಯರಸ್ತೆಯಲ್ಲಿ ಹಿಂದೂ ಮಹಾ ಮಂಡಳಿಯಿಂದ ಮೂರನೇ ವರ್ಷದ ಗಣಪತಿ ಪ್ರತಿಷ್ಠಾಪಿಸಲಾಗಿದೆ.

ಇಲ್ಲಿನ ಕೊಟ್ಟಾಲ್ ರಸ್ತೆ 8ನೇ ವಾರ್ಡ್ ಎಸ್‌ಎನ್ ಪೇಟೆ ಯುವಕರ ಬಳಗದಿಂದ ಗೋಲ್ಡ್ ಗಣಪತಿ ಕೂರಿಲಾಗಿದೆ. ವರಸಿದ್ಧಿ ವಿನಾಯಕ ಯುವಕರ ಮಂಡಳಿಯಿಂದ 26ನೇ ವಾರ್ಷಿಕೋತ್ಸವದ ಅಂಗವಾಗಿ ಮಹಾರಾಜ ಗಣಪತಿಯನ್ನು ಎಸ್. ವಿ.ಎನ್. ಶಾಲೆ ಬಳಿಯಲ್ಲಿ ಕೂರಿಸಲಾಗಿದೆ. ಪಟ್ಟಣದ 9/15ನೇ ವಾರ್ಡಿನ ಗಾಂಧಿನಗರದಲ್ಲಿ ಯಂಗ್ ಸ್ಟಾರ್ಸ್ ಯುವಕರ ಮಂಡಳಿಯಿಂದ ಸೌದತ್ತಿ ಯಲ್ಲಮ್ಮನನ್ನು ತಕೆ ಮೇಲೆ ಹೊತ್ತ ಗಣಪತಿ ಮೂತಿ ಪ್ರತಿಷ್ಠಾಪಿಸಲಾಗಿದೆ. ಈ ಸಂದರ್ಭದಲ್ಲಿ ಮಂಡಳಿಯವಾರದ ರಾಘವೇಂದ್ರ, ಯಶ್ವಂತ, ಓಬಳೇಶ, ವಿಜಯಕುಮಾರ, ಜೋಗಿ, ನಂದು, ಮಹೇಶ, ಮಲ್ಲೇಶಿ, ರವಿ, ಮಲ್ಲಿಕಾರ್ಜುನ, ನಾಗಾರ್ಜುನ ಇದ್ದರು.

ಇಲ್ಲಿನ ಇಂದಿರಾನಗರದಲ್ಲಿ ಗಜಾನನ ಯುವ ಚೇತನ ಯುವಕರ ಸಂಘದಿಂದ 41ನೇ ವಾರ್ಷಿಕೋತ್ಸವದ ಪ್ರಯುಕ್ತ ಕಂಪ್ಲಿ ಕಾ ಅಧಿಪತಿಯ ಛತ್ರಪತಿ ಸಂಭಾಜಿ ಮಹಾರಾಜ್ ಗಣಪ, ನಡುವಲ ಮಸೀದಿ ಬಳಿಯ ಸಂತೆ ಮಾರುಕಟ್ಟೆ ರಸ್ತೆ ಬದಿಯಲ್ಲಿ ಸರಾಫ್ ವರ್ತಕರ ಮತ್ತು ಕೆಲಸಗಾರರ ಸಂಘ ಮತ್ತು ಗಜಾನನ ಉತ್ಸವ ಸಮಿತಿಯಿಂದ ಗಣಪ, ಇಲ್ಲಿನ ಭಾರತ್ ಚಿತ್ರಮಂದಿರದ ಕೂಲಿಕಟ್ಟೆ ಬಸವೇಶ್ವರ ಹತ್ತಿರ ಹಿಂದೂ ಯುವ ಸೇನೆಯಿಂದ ಮಹಾರಾಜ ಗಣಪ, ಹೀಗೆ ಸಾರ್ವಜನಿಕ ಸ್ಥಳ ಸೇರಿದಂತೆ ಗಲ್ಲಿಗಲ್ಲಿಗಳಲ್ಲಿ ಪ್ರತಿಷ್ಠಾಪಿಸಿದ ಗಣಪಗಳು ಜನರನ್ನು ತನ್ನತ್ತ ಆಕರ್ಷಿಸುತ್ತಿವೆ. ಮಹಿಳೆಯರು, ಮಕ್ಕಳು ಸೇರಿದಂತೆ ಜನರು ಪ್ರತಿಷ್ಠಾಪಿಸ ಗಣಪತಿ ಸ್ಥಳಕ್ಕೆ ಭೇಟಿ ನೀಡಿ, ಗಣಪತಿ ವೀಕ್ಷಣೆ ಜೊತೆಗೆ ದರ್ಶನ ಪಡೆದು, ಇಷ್ಟಾರ್ಥಗಳು ಈಡೇರಿಸುವಂತೆ ಬೇಡಿದರು.

ಅತಿ ಶೀಘ್ರದಲ್ಲಿ ಸ್ವತಂತ್ರ ನ್ಯಾಯಬೆಲೆ ಅಂಗಡಿ ಆರಂಭ : ಹೊಸಕೋಟೆ ಜಗದೀಶ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಅತಿ ಶೀಘ್ರದಲ್ಲೇ ಮೆಟ್ರಿ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸ್ವತಂತ್ರ ನ್ಯಾಯಬೆಲೆ ಅಂಗಡಿ ಆರಂಭವಾಗಲಿದೆ ಎಂದು ಸಹಕಾರ ಸಂಘದ ಅಧ್ಯಕ್ಷ ಹೊಸಕೋಟೆ ಜಗದೀಶ ಹೇಳಿದರು.

ತಾಲೂಕಿನ ಮೆಟ್ರಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 3ನೇ ವರ್ಷದ ವಾರ್ಷಿಕ ಮಹಾಜನ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ನ್ಯಾಯಬೆಲೆ ಅಂಗಡಿಗಾಗಿ ಸತತ ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ಬಂದಿದ್ದು, ಈಗ ಪಡಿತರ ಅಂಗಡಿಗೆ ಕಾಲ ಕೂಡಿ ಬಂದಿದೆ. ಮೆಟ್ರಿ ಸಹಕಾರ ಸಂಘವು ಉಪ್ಪಾರಹಳ್ಳಿ, ಚಿನ್ನಾಪುರ ಒಳಗೊಂಡಿದೆ. ಸ್ಥಳೀಯ ಶಾಸಕ ಜೆ.ಎನ್. ಗಣೇಶ್ ಅಣ್ಣನವರು ಇಲ್ಲಿನ ಸೊಸೈಟಿಗೆ ಸರ್ಕಾರಿ ನಿವೇಶನ ಒದಗಿಸಿ, ಅನುದಾನ ನೀಡುವ ಮೂಲಕ ಕಟ್ಟಡ ನಿರ್ಮಾಣಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದರು.

ನಂತರ ಪ್ರಭಾರ ಮುಖ್ಯಕಾರ್ಯನಿರ್ವಾಹಕ ಡಿಂಡಿ ಮಹರ್ಷಿ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘವು 944 ಸದಸ್ಯರನ್ನು ಹೊಂದಿದೆ. ಸುಮಾರು 25 ಲಕ್ಷ 91 ಸಾವಿರ ಶೇರು ಬಂಡವಾಳ ಒಳಗೊಂಡಿದೆ. 234 ಜನಕ್ಕೆ ಸುಮಾರು 1 ಕೋಟಿ 75 ಲಕ್ಷ ಕೆಪಿಸಿಸಿ ಸಾಲ, 107 ಜನಕ್ಕೆ ಸುಮಾರು 35 ಲಕ್ಷ 12 ಸಾವಿರ ಬಿಡಿಪಿ ಸಾಲ ವಿತರಿಸಲಾಗಿದೆ. ಒಂದು ಸ್ತ್ರೀಶಕ್ತಿ ಗುಂಪಿಗೆ ಸುಮಾರು 3 ಲಕ್ಷ ಸಾಲ ವಿತ-ರಿಸಿದೆ. ಸುಮಾರು 3 ಲಕ್ಷ 70 ಸಾವಿರ ಠೇವಣಿ ಸಂಗ್ರಹಿಸಿದೆ. 2025-26ನೇ ಸಾಲಿನಲ್ಲಿ ಸಂಘವು 39 ಸಾವಿರ ನಿವ್ವಳ ಲಾಭಗಳಿಸಿದೆ ಎಂದರು.




ಈ ಸಭೆಯಲ್ಲಿ ಇನ್ನಿತರ ವಿಷಯಗಳನ್ನು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಗಂಗಾಧರ, ನಿರ್ದೇಶಕರಾದ ಹೊನ್ನಳ್ಳಿ ಗಂಗಾಧರ, ಜಮಾಪುರ ವೀರಭದ್ರಪ್ಪ, ಅಯ್ಯಪ್ಪ ಸಿಂಧಿಗೇರಿ ಚಂದ್ರಶೇಖರ, ಶೇಕ್ಷಾವಲಿ, ಪಾಂಡುರಂಗ, ಗಿರೆಡ್ಡಿ ಮರೇಗೌಡ, ಪಕ್ಕೀರಪ್ಪ, ಲಕ್ಷ್ಮೀ, ಮಂಜುಳಾ, ನಾಗರಾಜಗೌಡ(ಬ್ಯಾಂಕ್ ಪ್ರತಿನಿಧಿ), ರಾಮಚಂದ್ರಪ್ಪ(ವೃತ್ತ ಮೇಲ್ವಿಚಾರಕ) , ಮುಖಂಡರಾದ ಚಿದಾನಂದಪ್ಪ, ಲಕ್ಷ್ಮಣ, ಉಪ್ಪಾರಹಳ್ಳಿ ತಿಮ್ಮಪ್ಪ, ಚಿನ್ನಾಪುರ ನಾಗರಾಜ, ಶೇಷಪ್ಪ ಸೇರಿದಂತೆ ರೈತರು, ಸಿಬ್ಬಂದಿ ಇದ್ದರು.

ಮೆಕ್ಕಾ ಮೇಲಿನ ಹೌತಿ ದಾಳಿಯನ್ನು ಯಶಸ್ವಿಯಾಗಿ ವಿಫಲಗೊಳಿದ ಸೌದಿ

❏ ನೈಜ್ಯ ದೆಸೆ ನ್ಯೂಸ್

ರಿಯಾದ್: ಪವಿತ್ರ ಸ್ಥಳ ಮೆಕ್ಕಾ ಮೇಲೆ ಹೌತಿ ಬಂಡುಕೋರರು ನಡೆಸಲು ಉದ್ದೇಶಿಸಿದ್ದ ಡ್ರೋನ್ ದಾಳಿಯನ್ನು ಯಶಸ್ವಿಯಾಗಿ ವಿಫಲಗೊಳಿಸಲಾಗಿದೆ ಎಂದು ಸೌದಿ ಅರೇಬಿಯಾ ಹೇಳಿದೆ.ಮೆಕ್ಕಾದ ದಕ್ಷಿಣ ಭಾಗದಲ್ಲಿ ಯೆಮೆನ್‌ನ ಹೌತಿ ಬಂಡುಕೋರರು ಹಾರಿಸಿದ್ದ ಸ್ಫೋಟಕ ಡ್ರೋನ್ ಅನ್ನು ರಾಯಲ್ ಸೌದಿ ವಾಯು ರಕ್ಷಣಾ ಪಡೆ ಯಶಸ್ವಿಯಾಗಿ ಹೊಡೆದುರುಳಿಸಿದೆ. ಡ್ರೋನ್ ಮೆಕ್ಕಾದ ನಿರ್ಬಂಧಿತ ವಾಯುಪ್ರದೇಶವನ್ನು ಪ್ರವೇಶಿಸುವ ಮುನ್ನವೇ ಅದನ್ನು ಹೊಡೆದು ನಾಶಪಡಿಸಲಾಗಿದೆ



ಎಂದು ಸೌದಿ ನೇತೃತ್ವದ ಒಕ್ಕೂಟ ತಿಳಿಸಿದೆ.

ಈ ಕೃತ್ಯವನ್ನು ಕಟುವಾಗಿ ಖಂಡಿಸಿರುವ ಸೌದಿ ಸೇನೆ, ಮೆಕ್ಕಾ ಮತ್ತು ಮದೀನಾದ ಪವಿತ್ರ ಕ್ಷೇತ್ರಗಳು ಹಾಗೂ ಯಾತ್ರಿಕರ ಭದ್ರತೆ ತಮಗೆ ಮೊದಲ ಆದ್ಯತೆ ಎಂದು ಹೇಳಿದೆ.ಸೌದಿ ಒಕ್ಕೂಟದ ವಕ್ತಾರ ಮೇಜರ್ ಜನರಲ್ ಟರ್ಕಿ ಅಲ್-ಮಲ್ಕಿ ನೀಡಿರುವ ಮಾಹಿತಿಯಂತೆ, ನಿನ್ನೆ ಸಂಜೆ ಮೆಕ್ಕಾದ ದಕ್ಷಿಣ ದಿಕ್ಕಿನಲ್ಲಿ ಈ ಡ್ರೋನ್ ಪತ್ತೆಯಾಗಿದ್ದು, ಕೂಡಲೇ ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಹೊಡೆದುರುಳಿಸಿ ಸಂಭವನೀಯ ಅಪಾಯವನ್ನು ತಪ್ಪಿಸಲಾಗಿದೆ. ಈ ದಾಳಿಯನ್ನು ಭಯೋತ್ಪಾದಕ ಹಾಗೂ ಪ್ರತಿ-ಕೂಲ ಕೃತ್ಯ ಎಂದು ಕರೆದಿರುವ ಸೌದಿ ಒಕ್ಕೂಟ, ಪವಿತ್ರ ಸ್ಥಳಗಳ ಮೇಲೆ ದಾಳಿ ನಡೆಸುವ ಯಾವುದೇ ಪ್ರಯತ್ನವನ್ನು ಸಹಿಸುವುದಿಲ್ಲ. ಹೌತಿಗಳ ವಿರುದ್ಧ ಅಗತ್ಯ ಬಿದ್ದರೆ ಕಠಿಣ ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಸಿದೆ.

ಜುಲೈ 2017ರಲ್ಲಿ ಹೌತಿಗಳು ಮೆಕ್ಕಾದ ದಿಕ್ಕಿಗೆ ಬ್ಯಾಲಿಸ್ಟಿಕ್ ಕ್ಷಿಪಣಿ ಹಾರಿಸಿದ್ದರು. ಆ ಘಟನೆಯ ಬಳಿಕ ಪವಿತ್ರ ನಗರವನ್ನು ಗು-ರಿಯಾಗಿಸಿಕೊಂಡು ನಡೆದ ಎರಡನೇ ಪ್ರಮುಖ ಯತ್ನ ಇದಾಗಿದೆ ಎಂದು ಸೌದಿ ಪಡೆಗಳು ತಿಳಿಸಿವೆ. ಇತ್ತ, ಮೆಕ್ಕಾವನ್ನು ಗುರಿಯಾಗಿಸಿಕೊಂಡಿದ್ದ ಆರೋಪವನ್ನು ಹೌತಿ ಬಂಡುಕೋರರು ನಿರಾಕ-ರಿಸಿದ್ದಾರೆ. ಬದಲಾಗಿ, ಸೌದಿ ಅರೇಬಿಯಾದ ಎಫ್-15 ಮತ್ತು ಟೈಫೂನ್ ಯುದ್ಧವಿಮಾನಗಳು ಯೆಮೆನ್‌ನ ಶಾಲೆಗಳು, ಸೇತುವೆಗಳು ಮತ್ತು ರಸ್ತೆಗಳು ಸೇರಿದಂತೆ ನಾಗರಿಕ ಪ್ರದೇಶಗಳ ಮೇಲೆ 24 ಗಂಟೆಗಳಲ್ಲಿ 52 ವೈಮಾನಿಕ ದಾಳಿಗಳನ್ನು ನಡೆಸಿವೆ ಎಂದು ಹೌತಿ ವಕ್ತಾರ ಯಾಹ್ಯಾ ಸಾರಿ ಆರೋಪಿಸಿದ್ದಾರೆ.

ಸಿಂಧನೂರಿನಲ್ಲಿ 'ವಯೋಮಿತ್ರ ಆಯುಷ್ ಶಿಬಿರ' ಯಶಸ್ವಿ: ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಧ ವಿತರಣೆ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ರಾಷ್ಟ್ರೀಯ ಆಯುಷ್ ಅಭಿಯಾನದಡಿಯಲ್ಲಿ ಸರಕಾರಿ ಯುನಾನಿ ಚಿಕಿತ್ಸಾಲಯದ ವತಿಯಿಂದ ನಗರದ ಖಾದ್ರಿಯ ಕಾಲೋನಿಯಲ್ಲಿ ಹಮ್ಮಿಕೊಳ್ಳಲಾಗಿದ್ದ "ಕೀಲು, ಮೂಳೆ ವ್ಯಾಧಿಗಳು ಮತ್ತು ವಯೋಮಿತ್ರ ಆರೋಗ್ಯ ಆಯುಷ್ ಶಿಬಿರ"ವು ಸ್ಥಳೀಯ ಸಾರ್ವಜನಿಕರ ಉತ್ತಮ ಸ್ಪಂದನೆಯೊಂದಿಗೆ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ವೈದ್ಯಾಧಿಕಾರಿ ಡಾ. ಅಮ್ಜದ್ ಶರೀಫ್ ಅವರು, "ಆಯುಷ್ ಚಿಕಿತ್ಸಾ ಪದ್ಧತಿಯು ಯಾವುದೇ ಅಡ್ಡಪರಿಣಾಮಗಳಿಲ್ಲದೆ ನೈಸರ್ಗಿಕವಾಗಿ ದೇಹದ ಆರೋಗ್ಯವನ್ನು ಕಾಯ್ದುಕೊಳ್ಳಲು ಸಹಕಾರಿಯಾಗಿದೆ. ವಿಶೇಷವಾಗಿ ವಯೋಸಹಜವಾಗಿ ಕಾಡುವ ಕೀಲು ಮತ್ತು ಮೂಳೆ ನೋವುಗಳಿಗೆ ಯುನಾನಿ ಹಾಗೂ ಆಯುಷ್ ಪದ್ಧತಿಯಲ್ಲಿ ಅತ್ಯುತ್ತಮ ಪರಿಹಾರವಿದೆ. ಸಾರ್ವಜನಿಕರು ದಿನನಿತ್ಯದ ಜೀವನದಲ್ಲಿ ಯೋಗ ಮತ್ತು ಸರಿಯಾದ ಪಥ್ಯಾಹಾರಗಳನ್ನು



ಅಳವಡಿಸಿಕೊಳ್ಳಬೇಕು" ಎಂದು ತಿಳಿಸಿದರು. ಮತ್ತೊಬ್ಬ ವೈದ್ಯಾಧಿಕಾರಿ ಡಾ. ಆಯಿಶಾ ತಹಸೀನ್ ಅವರು ಆಗಮಿಸಿದ್ದ ನೂರಾರು ಹಿರಿಯ ನಾಗ-ರಿಕರಿಗೆ ಉಚಿತ ವೈದ್ಯಕೀಯ ತಪಾಸಣೆ ನಡೆಸಿ, ವಯೋಸಹಜ ಕಾಯಿಲೆಗಳ ನಿರ್ವಹಣೆ ಹಾಗೂ ಆರೈಕೆಯ ಕುರಿತು ಸೂಕ್ತ ಸಲಹೆಗಳನ್ನು ನೀಡಿದರು.

ಶುಶ್ರೂಷಾಧಿಕಾರಿ ರಾಜಪ್ಪ ಅವರಿಂದ ಉಚಿತ ರಕ್ತದೊತ್ತಡ (ಃಕ) ಹಾಗೂ ಮಧುಮೇಹ (ಖಣರಿಚಿಡಿ) ತಪಾಸಣೆ ನಡೆಯಿತು. ತಪಾಸಣೆಯ ನಂತರ ಫಾರ್ಮಸಿ ಅಧಿಕಾರಿ ಭಾರ್ಗವ ಅವರು ರೋಗಿಗಳಿಗೆ ಉಚಿತವಾಗಿ ಆಯುಷ್ ಹಾಗೂ ಯುನಾನಿ ಔಷಧಗಳನ್ನು ವಿತರಿಸಿದರು. ಸಾರ್ವಜನಿಕರ ದಿನನಿತ್ಯದ ಆರೋಗ್ಯ ರಕ್ಷಣೆಗೆ ನೆರವಾಗುವ ಸರಳ ಯೋಗಾಸನಗಳನ್ನು ಪರಿಚಯಿಸಿ, ಅವುಗಳ ಸರಿ ಅಭ್ಯಾಸದ ಕುರಿತು ಪ್ರತ್ಯಕ್ಷ ಪ್ರಾತ್ಯಕ್ಷಿಕೆ ನೀಡಿ ಅರಿವು ಮೂಡಿಸಲಾಯಿತು. ಶಿಬಿರದ ಯಶಸ್ಸಿಗೆ ಸ್ಥಳೀಯ ಅಂಗನವಾಡಿ ಶಿಕ್ಷಕಿ ಭಾಗ್ಯಮ್ಮ ಅವರು ಸಹಕರಿಸಿದರು. ಚಿಕಿತ್ಸಾಲಯದ ಸಿಬ್ಬಂದಿ ಖಲಂದರ್ ಅವರು ಅಗತ್ಯ ಮೂಲಸೌಕರ್ಯ ಹಾಗೂ ಕಾರ್ಯಕ್ರಮದ ನಿರ್ವಹಣೆಯನ್ನು ವಹಿಸಿಕೊಂಡಿದ್ದರು. ರಾಷ್ಟ್ರೀಯ ಆಯುಷ್ ಅಭಿಯಾನದ ಮುಖ್ಯ ಉದ್ದೇಶವೆಂದರೆ ಬಡ ಮತ್ತು ಮಧ್ಯಮ ವರ್ಗದ ಜನರಿಗೆ, ವಿಶೇಷವಾಗಿ ಹಿರಿಯ ನಾಗರಿಕರಿಗೆ ಉಚಿತ ಹಾಗೂ ಗುಣಮಟ್ಟದ ಪರ್ಯಾಯ ವೈದ್ಯಕೀಯ ಸೇವೆಗಳನ್ನು ತಲುಪಿಸುವುದಾಗಿದೆ. ಕೀಲು ನೋವು, ಬೆನ್ನುನೋವು, ವಾತ ಹಾಗೂ ಮಧುಮೇಹದಂತಹ ದೀರ್ಘಕಾಲೀನ ಕಾಯಿಲೆಗಳಿಗೆ ಸರಕಾರಿ ಯುನಾನಿ ಚಿಕಿತ್ಸಾಲಯದಲ್ಲಿ ನಿರಂತರವಾಗಿ ಉಚಿತ ತಪಾಸಣೆ ಮತ್ತು ಔಷಧಗಳು ಲಭ್ಯವಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕಾಗಿ ವೈದ್ಯಕೀಯ ತಂಡ ಮನವಿ ಮಾಡಿದೆ. ಖಾದ್ರಿಯ ಕಾಲೋನಿಯ ನೂರಾರು ಹಿರಿಯ ನಾಗ-ರಿಕರು ಹಾಗೂ ಸ್ಥಳೀಯರು ಈ ಉಚಿತ ಶಿಬಿರದಲ್ಲಿ ಪಾಲ್ಗೊಂಡು ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಗಳ ಪ್ರಯೋಜನ ಪಡೆದುಕೊಂಡರು.

ನೇಮಕಾತಿ ಪ್ರಕಟಣೆ

ಅಕಖಿಖ ನೇಮಕಾತಿ 2026 – 110 ಒಖಿಖ ಮತ್ತು ಇಂಜಿನಿಯರಿಂಗ್ ಆಫೀಸರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 15, 2026

CPRI ನೇಮಕಾತಿ 2026: 110 MTS ಮತ್ತು ಇಂಜಿನಿಯ–ರಿಂಗ್ ಆಫೀಸರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸೆಂಟ್ರಲ್ ಪವರ್ ರಿಸರ್ಚ್ ಇನ್‌ಸ್ಟಿಟ್ಯೂಟ್ (CPRI) ತನ್ನ ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಒಖಿಖ ಮತ್ತು ಇಂಜಿನಿಯರಿಂಗ್ ಆಫೀಸರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಸೆಪ್ಟೆಂಬರ್–2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cpri.res.in

ಕಾಯಕದಲ್ಲಿಯೇ ದೇವರನ್ನು ಕಾಣಬೇಕು ಬಿ.ಎಂ. ಜೋಷಿ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಸರ್ ಎಂ. ವಿಶ್ವೇಶ್ವರಯ್ಯ ಅವರ 166ನೇ ಜನ್ಮದಿನಾಚರಣೆಯನ್ನು ಸಿವಿಲ್ ಎಂಜಿನಿಯರ್ ಸಂಘದ ಅಧ್ಯಕ್ಷ ವಿರೇಶ ಬಂಗಾರಶೆಟ್ಟರ್ ಅವರ ಕಚೇರಿಯಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಬಿ.ಎಂ. ಜೋಷಿ, "ದೇವರನ್ನು ಹುಡುಕುವುದನ್ನೇ ಕಾಯಕವನ್ನಾಗಿ ಮಾಡಿಕೊಳ್ಳದೆ, ನಿಮ್ಮ ಕಾಯಕದಲ್ಲಿಯೇ ದೇವರನ್ನು ಕಾಣಬೇಕು. ಜೀವನದಲ್ಲಿ ಶಿಸ್ತು ಹಾಗೂ ಸ್ವಚ್ಛತೆಯನ್ನು ಅಳವಡಿಸಿಕೊಂಡು, ಮಾಡುವ ಕೆಲಸದ ಮೇಲೆ ಶ್ರದ್ಧೆ ಮತ್ತು ಭಕ್ತಿ ಇರಬೇಕು.



ಇದೇ ನಾವು ಸರ್ ಎಂ. ವಿಶ್ವೇಶ್ವರಯ್ಯ ಅವ–ರಿಗೆ ನೀಡುವ ನಿಜವಾದ ಕಾಣಿಕೆ" ಎಂದು ಹೇಳಿದರು. ಈ ಸಂದರ್ಭದಲ್ಲಿ ಸಿವಿಲ್ ಎಂಜಿನಿಯರ್ ಸಂಘದ ಅಧ್ಯಕ್ಷ ವಿರೇಶ ಬಂಗಾರಶೆಟ್ಟರ್, ಶ್ರೀಧರ ಘೋರ್ಪಡೆ, ಕುಮಾರ ಬಡಿಗೇರ, ಶ್ರೀಶೈಲ ಬಡಿಗೇರ, ಶರಣಪ್ಪ ಬಡಿಗೇರ, ಸುನೀಲ ಘೋರ್ಪಡೆ, ಮಂಜುನಾಥ ಮಹಾಲಿಂಗಪುರ, ಅಮೃತರಾಜ ಜ್ಞಾನಮೋಟೆ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಗಣೇಶೋತ್ಸವಕ್ಕೆ ತೆರಳಿದ್ದ ಯುವಕನ ಕೊಲೆ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಗಣೇಶೋತ್ಸವ ಕಾರ್ಯಕ್ರಮ ವೀಕ್ಷಿಸಲು ಗೆಳೆಯನೊಂದಿಗೆ ತೆರಳಿದ್ದ ಯುವಕನ ಮೇಲೆ ಗುಂಪೊಂದು ಮನಬಂದಂತೆ ಹಲ್ಲೆ ನಡೆಸಿದ ಪರಿಣಾಮ ಯುವಕ ಮೃತಪಟ್ಟಿರುವ ಘಟನೆ ಲಿಂಗಸಗೂರು ತಾಲ್ಲೂಕಿನ ಭೂಪುರ ತಾಂಡಾದಲ್ಲಿ ಮಂಗಳವಾರ ಸಂಜೆ ನಡೆದಿದೆ.



ರಾಂಪುರ–ಭೂಪುರ ನಿವಾಸಿ ಶಿವನಗೌಡ ನಾಯಕ (26) ಮೃತಪಟ್ಟ ದುರ್ದೈವಿ. ಗಣೇಶೋತ್ಸವ ಕಾರ್ಯಕ್ರಮ ನೋಡಲು ಗೆಳೆಯನೊಂದಿಗೆ ತೆರಳಿದ್ದ ವೇಳೆ ಗಲಾಟೆ ನಡೆದಿದ್ದು, ಈ ಸಂದರ್ಭದಲ್ಲಿ ಅಂಜಲು, ಲಕ್ಕಪ್ಪ, ಶಂಕ್ರಪ್ಪ ಹಾಗೂ ವೆಂಕಟೇಶ್ ಎಂಬುವವರು ಗುಂಪುಕಟ್ಟಿಕೊಂಡು ಕಲ್ಲು ಹಾಗೂ ಇತರ ವಸ್ತುಗಳಿಂದ ಶಿವನಗೌಡ ನಾಯಕನ ಮೇಲೆ ಮನಬಂದಂತೆ ಹಲ್ಲೆ ನಡೆಸಿದ್ದಾರೆ ಎಂದು ದೂ–ರಿನಲ್ಲಿ ಆರೋಪಿಸಲಾಗಿದೆ. ಹಲ್ಲೆಯಿಂದ ತಲೆಗೆ ಗಂಭೀರ ಗಾಯವಾಗಿದ್ದು, ತಲೆಯಲ್ಲಿ ರಕ್ತ ಹೆಪ್ಪುಗಟ್ಟಿದ ಪರಿಣಾಮ ಶಿವನಗೌಡ ನಾಯಕ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಮತ್ತೋರ್ವ ಗೆಳೆಯ ಹನುಮಂತ ಗಲಾಟೆಯಿಂದ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ ಎಂದು ತಿಳಿದುಬಂದಿದೆ. ಮೃತ ಶಿವನಗೌಡ ನಾಯಕ ಅವರಿಗೆ ಮೂರು ಮಕ್ಕಳಿದ್ದು, ಅವರ ಪತ್ನಿ ಆರು ತಿಂಗಳ ಬಾಣಂತಿಯಾಗಿದ್ದಾರೆ. ತವರು ಮನೆಯಲ್ಲಿದ್ದ ಪತ್ನಿಗೆ ಪತಿಯ ಸಾವಿನ ಸುದ್ದಿ ತಿಳಿದು ಆಘಾತಕ್ಕೊಳಗಾಗಿದ್ದು, ಪತಿಯನ್ನು ನೆನೆದು ಕಣ್ಣೀರಿಡುತ್ತಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಲಿಂಗಸಗೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನೆ ಕು–ರಿತು ಲಿಂಗಸಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕಂಪ್ಲಿಯಲ್ಲಿ ಸೆ. 17ರಿಂದ ವೈಭವದ 'ಹಿಂದೂ ಮಹಾಮಂಡಳಿ' ಗಣೇಶೋತ್ಸವ: ಸಾಂಸ್ಕೃತಿಕ ಕಾರ್ಯಕ್ರಮಗಳ ಸಪ್ತಾಹ

ನಮ್ಮ ವೇದಿಕೆ ನಿಮ್ಮ ಪ್ರತಿಭೆ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಪಟ್ಟಣದ ಪ್ರತಿಷ್ಠಿತ ಹಿಂದೂ ಮಹಾಮಂಡಳಿ ವತಿಯಿಂದ 2026ನೇ ಸಾಲಿನ ಶ್ರೀ ಗಣೇಶೋತ್ಸವವನ್ನು ಅತ್ಯಂತ ವೈಭವದಿಂದ ಹಮ್ಮಿಕೊಳ್ಳಲಾಗಿದ್ದು, ಸೆಪ್ಟೆಂಬರ್ 17ರಿಂದ 26ರ ವರೆಗೆ ವಿವಿಧ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಮಂಡಳಿಯ ಪದಾಧಿಕಾರಿಗಳು ತಿಳಿಸಿದ್ದಾರೆ.

ಸೆ. 23ರ ಬುಧವಾರ ಮಧ್ಯಾಹ್ನ 12.30ಕ್ಕೆ ಶ್ರೀ ಉದ್ಭವ ಮಹಾಗಣಪತಿ ದೇವಸ್ಥಾನದ ಮುಂಭಾಗದಲ್ಲಿ ಸರ್ವ ಭಕ್ತಾದಿಗಳಿಗೆ ಬೃಹತ್ ಅನ್ನದಾಸೋಹ ಸೇವೆ ಏರ್ಪಡಿಸಲಾಗಿದೆ. ಮನರಂಜನೆ ಮತ್ತು ಸಾಂಸ್ಕೃತಿಕ ಸಪ್ತಾಹ: ಹಳೇ ಸಿಂಡಿಕೇಟ್ ಬ್ಯಾಂಕ್ ಮುಂಭಾಗದಲ್ಲಿ



ನಿರ್ಮಿಸಲಾಗಿರುವ ಭವ್ಯ ವೇದಿಕೆಯಲ್ಲಿ ಪ್ರತಿದಿನ ಸಂಜೆ ವೈವಿಧ್ಯಮಯ ಕಾರ್ಯಕ್ರಮಗಳು ಜರುಗಲಿವೆ:ಸೆ. 17 (ಸಂಜೆ 6.30): ಶ್ರೀ ದುರ್ಗಾ ನಾಟ್ಯಕಲಾ ಕೇಂದ್ರ ಮತ್ತು ಮೈಕಲ್ ಜಾಕ್ಸನ್ ಡ್ಯಾನ್ಸ್ ಸ್ಕೂಲ್ ತಂಡಗಳಿಂದ ಸಾಂಸ್ಕೃತಿಕ ನೃತ್ಯ ವೈಭವ.ಸೆ. 18 (ಮಧ್ಯಾಹ್ನ 3.00): ಉದ್ಭವ ಮಹಾಗಣಪತಿ ದೇವಸ್ಥಾನದ ಮುಂಭಾಗದಲ್ಲಿ ಯುವಕ–ರಿಗಾಗಿ ಸಾಹಸಮಯ 'ರಂಗಿನ ಗಡಿಗಿ ಆಟ'. ಸೆ. 19 (ಸಂಜೆ 6.30): ಮಕ್ಕಳಿಗೆ ವೇಷಭೂಷಣ ಸ್ಪರ್ಧೆ ಹಾಗೂ ಸ್ಥಳೀಯ ಸಾಹಿತಿಗಳಿಂದ ಕವಿಗೋಷ್ಠಿ. ಸೆ. 20 (ಬೆಳಿಗ್ಗೆ 10.30): ಮಹಿಳೆಯ–ರಿಗಾಗಿ ಆಕರ್ಷಕ ರಂಗೋಲಿ ಸ್ಪರ್ಧೆ. ಸೆ. 21 (ಸಂಜೆ 6.30): ಶ್ರೀ ಕನ್ನಿಕಾ ಭಜನಾ ಮಂಡಳಿ ಮತ್ತು ತಂಡದಿಂದ ಭಜನೆ ಹಾಗೂ ಕೋಲಾಟ ಪ್ರದರ್ಶನ.

ಸೆ. 25 (ಸಂಜೆ 6.30): ಸ್ಥಳೀಯ ಕಲಾವಿರಿಂದ ಕರೋಕೆ ಗಾಯನ, ಹಾಸ್ಯ ಸಂಜೆ ಹಾಗೂ ಮಕ್ಕಳಿಂದ ದೇಶಭಕ್ತಿ ಗೀತೆಗಳ ನೃತ್ಯ ಪ್ರದರ್ಶನ. (ಭಾಗವಹಿಸುವ ಆಸಕ್ತ ಸ್ಥಳೀಯ ಕಲಾವಿದರು ಮುಂಚಿತವಾಗಿ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ). ಸೆ. 26ಕ್ಕೆ ಬೃಹತ್ ಶೋಭಾಯಾತ್ರೆ, ಸೆಪ್ಟೆಂಬರ್ 26ರ ಶನಿವಾರ ಮಧ್ಯಾಹ್ನ 2.00 ಗಂಟೆಯಿಂದ ಹಿಂದೂ ಮಹಾಮಂಡಳಿ ಗಣೇಶನ ಮಹಾ ವಿಸರ್ಜನಾ ಮಹೋತ್ಸವ ಆರಂಭವಾಗಲಿದೆ. ಹತ್ತಾರು ಪ್ರಸಿದ್ಧ ಮತ್ತು ವಿಶೇಷ ಕಲಾತಂಡಗಳ ಸಮ್ಮುಖದಲ್ಲಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಬೃಹತ್ ಶೋಭಾಯಾತ್ರೆ ಜರುಗಲಿದೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಅದ್ದೂರಿ ಗಣೇಶೋತ್ಸವಕ್ಕೆ ವಿಶ್ವ ಹಿಂದೂ ಪರಿಷತ್, ಭಜರಂಗದಳ ಹಾಗೂ ಹಿಂದೂ ಮಹಾಮಂಡಳಿಯ ಪದಾಧಿಕಾರಿಗಳು ಕಂಪ್ಲಿ ಮತ್ತು ಸುತ್ತಮುತ್ತಲಿನ ಸಾರ್ವಜನಿಕ ಭಕ್ತಾದಿಗಳಿಗೆ ಹಾರ್ದಿಕವಾಗಿ ಸ್ವಾಗತಿಸಿದ್ದಾರೆ.

ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಕುರಿತು ಜಾಗೃತಿ ಜಾಥಾ.

❏ ನೈಜ್ಯ ದೆಸೆ ನ್ಯೂಸ್

ಮತದಾರ ಪಟ್ಟಿಯಲ್ಲಿ ತಪ್ಪದೆ ಹೆಸರು ಸೇರ್ಪಡೆಗೊಳಿಸಿ ಎಂದು ಶ್ರೀಮತಿ ಗೀತಾ ಹಿರೇಮಠ್ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕು ಅರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂದನೂರ್ ಇವರು ಮಾತನಾಡಿ

ತಾಲೂಕಿನ ಸಾಲಗುಂದಾ ಸಾರ್ವಜನಿಕರು ತಮ್ಮ ಹೆಸರು ಮತದಾನ ಪಟ್ಟಿಯಲ್ಲಿ ಇಲ್ಲದಿರುವ ಕುರಿತು ಮಾಹಿತಿ ಬಂದಲ್ಲಿ ಹತ್ತಿರದ ಬೂತ ಮಟ್ಟದ ಅಧಿಕಾರಿಗಳ ಬಳಿ ಅಗತ್ಯ ದಾಖಲಾತಿಗಳೊಂದಿಗೆ ತೆರಳಿ ಹೆಸರು ಸೇರ್ಪಡೆಗೊಳಿಸಿಕೊಳ್ಳಿ ಎಂದು ವಿನಂತಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯಾಧಿಕಾರಿಗಳು ಕಾರ್ಯಾಲಯ ಸಿಂಧನೂರು ಹಾಗೂ ಪ್ರಾಥಮಿಕ ಆರೋಗ್ಯ



ಕೇಂದ್ರ ಸಾಲಗುಂದ ಮತ್ತು ಸರ್ಕಾರಿ ಉರ್ದು ಪ್ರೌಢ ಶಾಲೆ ಸಾಲಗುಂದ ಸಹಯೋಗದೊಂದಿಗೆ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಕುರಿತು ಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಗ್ರಾಮದ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ 2002 ರ ಮತದಾರ ಪಟ್ಟಿ ಅನ್ವಯ ಮತದಾರರ ಪಟ್ಟಿಯಲ್ಲಿ ಹೆಸರು ತಪ್ಪಿದಲ್ಲಿ ಆತಂಕಕ್ಕೆ ಒಳಗಾಗದೆ, ಅಗತ್ಯ ದಾಖಲಾತಿಗಳೊಂದಿಗೆ ಬಿಎಲ್‌ಓ ರವರನ್ನು ಬೇಟಿಯಾಗಿ ನೊಂದಾಯಿಸಬೇಕೆಂದು ಮಾಹಿತಿ ನೀಡಿದರು.

18 ವರ್ಷ ತುಂಬಿದ ಯುವಕರು ಯುವತಿಯರು, ತಮ್ಮ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಿ ಎಂದು ತಿಳಿಸಿದರು.. ಜಾಥಾ: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (SIR) ವಿಶೇಷ ಅಭಿಯಾನ ಕಾರ್ಯಕ್ರಮವನ್ನು ಜಾಗೃತಿ ಜಾಥವನ್ನು ಹತ್ತಿರದ ಸಂತೆ ಮಾರ್ಕೆಟಿನಿಂದ ಬಸ್ ತಂಗುದಾಣದ (ಬಸ್ ಸ್ಟ್ಯಾಂಡ) ಮೂಲಕ ವಿದ್ಯಾರ್ಥಿಗಳೊಂದಿಗೆ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನರಲ್ಲಿ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ K S ಬೈರಮಟ್ಟಿ Sr. PHCO, ಸೈಫ್ ಖಾನ್ ಊಖಿಔ, ಅಮತೆಪ್ಪ ಮೇಟಿ ಶಾಲಾ ಮುಖ್ಯೋಪಾಧ್ಯಾಯರು , ಸೈಯದ್ ಮೋಸಿನ, ಆಯಿಷಾ ಸುಲ್ತಾನ್, ಸೈಯದ ಗಜಲಾ ರೂಹಿಹಾ, ಸಹ ಶಿಕ್ಷಕರುಗಳು, ಹಾಜರಿದ್ದರು.

ಸಾಲ ನೀಡದ ಎಂಡಿಸಿಸಿ ಬ್ಯಾಂಕ್ ವಿರುದ್ಧ ರೈತರ ಆಕ್ರೋಶ – ಶಾಸಕ ಜಿ.ಡಿ. ಹರೀಶ್ ಗೌಡ ಎದುರೇ ವಿಷ ಸೇವಿಸಲು ಯತ್ನ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಸಮಯಕ್ಕೆ ಸರಿಯಾಗಿ ರೈತರಿಗೆ ಸಾಲ ನೀಡದಿರುವುದನ್ನು ಖಂಡಿಸಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ?ಹುಣಸೂರು ಭಾಗದ ರೈತರು ಪ್ರತಿಭಟನೆ ನಡೆಸಿದ ವೇಳೆ ಸಾಲ ಸಿಗದ ರೈತನೊಬ್ಬ ವಿಷದ ಬಾಟಲಿ ಹಿಡಿದು ಆತ್ಮಹತ್ಯೆಗೆ ಮುಂದಾದರು. ತಕ್ಷಣ ಪೊಲೀಸರು ಬಾಟಲಿ ಕಿತ್ತುಕೊಂಡು ಅನಾಹುತ ತಪ್ಪಿಸಿದರೆ, ಶಾಸಕ ಜಿ.ಡಿ. ಹರೀಶ್ ಗೌಡ ಅವರು ರೈತರನ್ನು ಸಮಾಧಾನಪಡಿಸಿದರು.

ಮೈಸೂರಿನಲ್ಲಿ ಇರುವ ಮೈಸೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್(ಒಅಆ–ಅಅ) ಕಚೇರಿ ಎದುರು ಪ್ರತಿಭಟನೆ ನಡೆಸಿದ ರೈತರು, ಸಾಲ ಮಂಜೂರು ಮಾಡದ ಬ್ಯಾಂಕ್ ಅಧಿಕಾರಿಗಳ ನಡೆಯನ್ನು ಖಂಡಿಸಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸಾಲ ಮರುಪಾವತಿ ಮಾಡಿದರೂ ಪ್ರಾಥ–'ಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಬ್ಯಾಂಕ್‌ಗಳು ರೈತರಿಗೆ ಮರುಸಾಲ ನೀಡಲು ಹಿಂದೇಟು ಹಾಕಲಾಗುತ್ತಿದೆ.

ಹಳೆಯ ಸಾಲಗಳನ್ನು ತೀರಿಸಿದ್ದರೂ ಹಲವು ರೈತರಿಗೆ ಮತ್ತೆ ಸಾಲ ಪಾವತಿಸುವಂತೆ ಬಾಕಿ ನೋಟಿಸ್ ನೀಡಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಬ್ಯಾಂಕ್ ವಿರುದ್ಧ ಆರೋಪ: ಸಹಕಾರ ಕ್ಷೇತ್ರದ ಬ್ಯಾಂಕ್ ರೈತರ ನೆರವಿಗೆ ನಿಲ್ಲಬೇಕಾದರೆ, ಸಾಲ ನೀಡುವ ವಿಚಾರದಲ್ಲಿ ರಾಜಕೀಯ ಹಸ್ತಕ್ಷೇಪ ನಡೆಯುತ್ತಿದೆ. ಕೃಷಿ ಚಟುವಟಿಕೆಗಳಿಗೆ ಬ್ಯಾಂಕ್ ಸಾಲವನ್ನೇ ಪ್ರಮುಖವಾಗಿ ಅವಲಂಬಿಸಿರುವ ರೈತರು, ಹೊಸ ಸಾಲ ದೊರೆಯದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪಕ್ಷದ ಆಧಾರದಲ್ಲಿ ಸಾಲ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ರಾಜಕೀಯ ಒತ್ತಡ ಹಾಗೂ ಲಂಚ ನೀಡಿದವರಿಗೆ ಮಾತ್ರ ತಕ್ಷಣ ಸಾಲ ಸಿಗುತ್ತಿದೆ. ರೈತರಿಗೆ ಸಹಕಾರ ನೀಡಬೇಕಾದ ಎಂಡಿಸಿಸಿ ಬ್ಯಾಂಕ್ ಅಧಿಕಾರಿಗಳು ಪಿರಿಯಾಪಟ್ಟಣ ಶಾಸಕರ ಕೈಗೊಂಬೆಯಾಗಿದ್ದು, ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದರು.

ವಿಷ ಸೇವನೆಗೆ ಯತ್ನ: ಪ್ರತಿಭಟನೆ ವೇಳೆ ನಂದಿನಾಥಪುರದ ರೈತ ರಂಗಸ್ವಾಮಿ ವಿಷದ ಬಾಟಲಿ ಹಿಡಿದು ಆತ್ಮಹತ್ಯೆಗೆ ಯತ್ನಿಸಿದರು. ಇದರಿಂದ ಕೆಲಕಾಲ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕೂಡಲೇ ಎಚ್ಚೆತ್ತ ಪೊಲೀಸರು ಆತ್ಮಹತ್ಯೆಗೆ ಯತ್ನಿಸಿದ ರೈತನ ಕೈಯಲ್ಲಿದ್ದ ವಿಷದ ಬಾಟಲಿಯನ್ನು ವಶಕ್ಕೆ ಪಡೆದರು. ಬಳಿಕ ಶಾಸಕ ಜಿ.ಡಿ. ಹ–ರೀಶ್ ಗೌಡ ಅವರು ರೈತರೊಂದಿಗೆ




ಮಾತುಕತೆ ನಡೆಸಿ, ಸಮಾಧಾನಪಡಿಸಿದರು. ತಾಳಿ ಮಾರಿ ಸಾಲ ಕಟ್ಟಿದ್ದೇವೆ: ಪ್ರತಿಭಟನೆಯಲ್ಲಿ ರೈತರು ತಮ್ಮ ಅಸಮಾಧಾನವನ್ನು ತೀವ್ರವಾಗಿ ವ್ಯಕ್ತಪಡಿಸಿದರು. "ತಾಳಿ ಮಾರಿ ಸಾಲ ಕಟ್ಟಿದ್ದೇವೆ. ಕಾಲಕಾಲಕ್ಕೆ ಪಡೆದ ಸಾಲವನ್ನು ಮರುಪಾವತಿ ಮಾಡಿದ್ದರೂ ನಮಗೆ ಹೊಸ ಸಾಲ ನೀಡುತ್ತಿಲ್ಲ. ಬ್ಯಾಂಕ್ ಸಾಲ ನಂಬಿಕೊಂಡು ಬೆಳೆ ಬೆಳೆಯುತ್ತಿದ್ದೇವೆ. ಆದ–'ರೆ ಈಗ ಸಾಲ ನೀಡದೇ ಬ್ಯಾಂಕ್ ಸಿಬ್ಬಂದಿ ಅನಗತ್ಯವಾಗಿ ಸತಾಯಿಸುತ್ತಿದ್ದಾರೆ. ನಮಗೆ ಸಾಲ ನೀಡದಿದ್ದರೆ ಏನು ಮಾಡಬೇಕು ವಿಷ ಕುಡಿದು ಸಾಯಬೇಕಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಕೆ. ಮಹದೇವ್, ಮೈಮುಲ್ ಮಾಜಿ ಅಧ್ಯಕ್ಷ ಪ್ರಸನ್ನ ಸೇರಿದಂತೆ ಹಲವು ಮುಖಂಡರು, ರೈತರು ಹಾಗೂ ಪಿರಿಯಾಪಟ್ಟಣ ಹುಣಸೂರು ಭಾಗದ ನೂರಾರು ರೈತರು ಭಾಗವಹಿಸಿದ್ದರು.

ಸರ್ಕಾರಿ ಸೌಲಭ್ಯ ಪಡೆದು ಸಂಘದ ಬೆಳವಣಿಗೆಗೆ ಸಹಕರಿಸಿ: ಮಲ್ಲುಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ರೋಹಿಣಿ ಪುಟ್ಟರಾಜು ಕರೆ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ನಂಜನಗೂಡು ತಾಲೂಕು ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ಮಲ್ಲುಪುರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ಮೂರನೇ ವರ್ಷದ ವಾರ್ಷಿಕ ಮಹಾಸಭೆ ನಡೆಯಿತು ವಾರ್ಷಿಕ ಮಹಾಸಭೆಯ ಉದ್ಘಾಟನೆ ಮತ್ತು ಸಮಾರಂಭ.

ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧ್ಯಕ್ಷೆ ಆರ್ ರೋಹಿಣಿ ಪುಟ್ಟರಾಜ ರವರು ನಮ್ಮ ಸಹಕಾರ ಸಂಘ ಈಗ ತಾನೇ ಅಂಬೆಗಳಾಗುತ್ತಾ ಸಾಗುತ್ತಾ ಬರುತ್ತಿದ್ದು ರೈತರು ಸರಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ಪಡೆದುಕೊಳ್ಳುವ ಮೂಲಕ ಸಂಘದಲ್ಲಿ ಪಡೆದಂತ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿ ಸಂಘದ ಅಭಿವೃದ್ಧಿಗೆ ರೈತರು ಸಹಕಾರ ನೀಡಬೇಕು ಎಂದು ಹೇಳಿದರು ಸಂಘದ ಉಪಾಧ್ಯಕ್ಷ ಎಂ ವಿಷ್ಣು ಪ್ರಸಾದ್ ರವರು ಮಾತನಾಡಿ ನಮ್ಮ ಸಂಘ ಸ್ಥಾಪನೆಯಾಗಿ ಇಲ್ಲಿಗೆ 3 ವರ್ಷ ಆಗಿದೆ ಆದ್ದರಿಂದ ಸಂಘದಲ್ಲಿ ಲಾಭಾಂಶ ಕಡಿಮೆ ಇದ್ದು ಉತ್ತಮ ಲಾಭ ನಮ್ಮ ಸಂಘಕ್ಕೆ ಬರಬೇಕಾದರೆ ಸಂಘವು ಇನ್ನೂ ಎರಡು ಮೂರು ವರ್ಷಗಳು ಬೇಕಾಗುತ್ತದೆ ಅಲ್ಲಿ ತನಕ ರೈತರು ಸಂಘದ ಅಭಿವೃದ್ಧಿಗೆ ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡಬೇಕು ಎಂದು ರೈತರಲ್ಲಿ ಮನವಿ ಮಾಡಿದರು



ಅಲ್ಲದೆ ನಮ್ಮ ಸಂಘದ ಕಾರ್ಯ ಚಟುವಟಿ–ಕೆಗಳು ಬಾಡಿಗೆಯ ಕಟ್ಟಡದಲ್ಲಿ ನಡೆಯುತ್ತಿದ್ದು

ನಮ್ಮದೇ ಸಂಘದ ಕಟ್ಟಡವನ್ನು ನಿರ್ಮಿಸಿಕೊಳ್ಳಲು ಸ್ವಂತ ಜಾಗವನ್ನ ಖರೀದಿ ಮಾಡಲಾಗಿದ್ದು ಮುಂದಿನ ದಿನಗಳಲ್ಲಿ ಸರ್ಕಾರದಿಂದ ಸಂಘದ ಕಟ್ಟಡಕ್ಕೆ ಅನುದಾನ ಪಡೆದು ಸಂಘದ ಕಟ್ಟಡವನ್ನು ನಿರ್ಮಿಸಿಕೊಂಡು ನಮ್ಮ ಸಂಘದ ಕಾರ್ಯ ಚಟುವಟಿಕೆಯನ್ನು ನಡೆಸಲು ಅನುಕೂಲವಾಗಲಿದ್ದು ಇದರಿಂದ ನಮ್ಮ ಸಂಘಕ್ಕೆ ಬಾಡಿಗೆ ಕೊಡುವ ಹಣ ಉಳಿತಾಯ ಆಗಲಿದೆ ಅಲ್ಲದೆ ನಮ್ಮ ಸಂಘದಿಂದ ರೈತರಿಗೆ ಹಾಗೂ ಮಹಿಳಾ ಸಂಘದ ಸದಸ್ಯರುಗಳಿಗೆ ಕಡಿಮೆ ಬಡಿದರದಲ್ಲಿ ಸಾಲ ನೀಡಲಾಗುವುದು ಹಾಗೂ ಹೈನುಗಾರಿಕೆಗೂ ಸಹ ಹೆಚ್ಚು ಹೊತ್ತು ನೀಡಲಾಗಿದೆ ಎಂದು ತಿಳಿಸಿದ ಅವರುವಾಣಿಜ್ಯ ಸಾಲ ಹಾಗೂ ಕೃಷಿ ಚಟುವಟಿಕೆಯಲ್ಲಿ ಮಾಡುವ ರೈತರಿಗೆ ಬಡ್ಡಿ ರಹಿತ ಸಾಲವನ್ನು ಸಹ ನೀಡಲಾಗುತ್ತದೆ ರೈತರು ಖಾಸಗಿ ಬ್ಯಾಂಕಿನ ಮೊರೆ ಹೋಗದೆ ನಮ್ಮ ಸಂಘದಲ್ಲಿ ಸಾಲವನ್ನು ಪಡೆದು ಸಕಾಲದಲ್ಲಿ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿ ಸಂಘದ ಅಭಿವೃದ್ಧಿಗೆ ಸಹಕಾರ ನೀಡಿ ಎಂದು ಮನವಿ ಮಾಡಿದರು ರೈತ ಸಂಘದ ಮುಖಂಡ ನಂಜುಂಡಸ್ವಾಮಿ ಮಾತನಾಡಿ ನಮ್ಮ ಈ ಸಂಘಕ್ಕೆ ಸೇರುವ ಹಣಕಟ್ಟಿ ಸದಸ್ಯರಾಗಿರುವವರು ಯಾರು ಕೂಡ ತಮ್ಮ ಶೇರನ್ನು ವಾಪಸ್ ಪಡೆಯಬೇಡಿ ಏಕೆಂದರೆ ಸರ್ಕಾರದಿಂದ ಹಲವಾರು ಸೌಲಭ್ಯಗಳು ರೈತರಿಗೆ ದೊರೆಯುತ್ತವೆ

ಜೊತೆಗೆ ರೈತರ ಕಷ್ಟಕ್ಕೆ ಒಳಗಾದಾಗ ಸರ್ಕಾರ ರೈತರ ನೆರವಿಕೆ ಬರುವ ಜೊತೆಗೆ ರೈತರು ಪಡೆದಂತಹ ಸಾಲವನ್ನು ಮನ್ನಾ ಮಾಡುವ ಸಾಧ್ಯತೆ ಇದೆ ಆದ್ದರಿಂದ ರೈತರು ಯಾರು ಕೂಡ ನಮಗೆ ಸಾಲ ಸಿಗಲಿಲ್ಲ ಎಂದು ಭಾವಿಸಿ ಸಂಘದ ಶೇರುಹಣವನ್ನು ವಾಪಸ್ ಪಡೆಯಬೇಡಿ ಎಂದು ರೈತರಲ್ಲಿ ಮನವಿ ಮಾಡಿದರು ಸಭೆಯಲ್ಲಿ ಸಂಘದ ಕಾರ್ಯದರ್ಶಿ ಎಂ ಸುರೇಶ್ ರವರು ಮಾತನಾಡಿ 2025 ಹಾಗೂ 26 ನೇ ಸಾಲಿನ ವಾರ್ಷಿಕ ಮುಂಗಡ ಬಜೆಟ್ ಅನ್ನು ಮಂಡಿಸಿ ನಾವು ಮುಂದಿನ ವರ್ಷದ ಒಳಗೆ ಸುಮಾರು ಮೂರು ಲಕ್ಷ ಲಾಭದ ಗುರಿಯನ್ನು ಇಟ್ಟುಕೊಂಡಿದ್ದೇವೆ ಎಂದು ಸಭೆಯಲ್ಲಿ ತಿಳಿಸಿದರು ಇದೆ ರೈತರು ಮಾತನಾಡಿ ನಮ್ಮ ಸಂಘದ ಸದಸ್ಯರು ಯಾರಾದರೂ ಮರಣ ಹೊಂದಿದ್ದಾರೆ

ಅವರಿಗೆ ಧನ ಸಹಾಯ ಮಾಡುವ ಮೂಲಕ ನೆರವಾಗಿ ಜೊತೆಗೆ ನಮ್ಮ ರೈತರ ಮಕ್ಕಳಿಗೆ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಸಹಾಯ ಮಾಡಿ ಎಂದು ತಿಳಿಸಿದರು ರೈತರ ಸಲಹೆಯನ್ನು ಸ್ವೀಕರಿಸಿದ ಸಭೆಯ ಅಧ್ಯಕ್ಷರು ಉಪಾಧ್ಯಕ್ಷರು ಮುಂದಿನ ದಿನಗಳಲ್ಲಿ ನಿಮ್ಮ ಈ ಬೇಡಿಕೆಗಳಿಗೆ ಸ್ಪಂದಿಸುವ ಜೊತೆಗೆ ಸಂಘದ ಬೆಳವಣಿಗೆ ಕೂಡ ಹೆಚ್ಚು ಒತ್ತು ನೀಡುತ್ತವೆ ಎಂದು ಭರವಸೆ ನೀಡಿದರು ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಆರ್ ರೋಹಿಣಿ ಪುಟ್ಟರಾಜು ಉಪಾಧ್ಯಕ್ಷರಾದ ಎಂ ಎಷ್ಣೋ ಪ್ರಸಾದ್ ನಿರ್ದೇಶಕರುಗಳಾದ ಎಂ ಶಿವಶಂಕರ್ ಸೋಮು ಶಿವಣ್ಣ ರವಿ ಜನಾರ್ಧನ್ ಚಿಕ್ಕ ಸ್ವಾಮಿ ಎಂ ಮಹೇಶ್ ಅಂಕಪ್ಪ ಲೋಕ ಲಕ್ಷ್ಮಿ ಗುರುಸಿದ್ದೇಗೌಡ ಹಾಗೂ ಸಂಘದ ಕಾರ್ಯದರ್ಶಿ ಎಂ ಸುರೇಶ್ ಹಾಗೂ ಸಿಬ್ಬಂದಿ ವರ್ಗದವರು ರೈತರು ರೈತ ಮಹಿಳೆಯರು ಮಹಿಳೆ ಸಂಘದ ಸದಸ್ಯರುಗಳು ಸಭೆಯಲ್ಲಿ ಭಾಗಿಯಾಗಿದ್ದರು

ವಚನ ದರ್ಶನ

ಭಕ್ತಿ ಎಂತಹದಯ್ಯಾ ದಾಸಯ್ಯ ಮಾಡಿದಂತಹದಯ್ಯಾ. ಭಕ್ತಿ ಎಂತಹದಯ್ಯಾ ಸಿರಿಯಾಳ ಮಾಡಿದಂತಹದಯ್ಯಾ. ಭಕ್ತಿ ಎಂತಹದಯ್ಯಾ ನಮ್ಮ ಬಲ್ಲಾಳ ಮಾಡಿದಂತಹದಯ್ಯಾ. ಭಕ್ತಿ ಎಂತಹದಯ್ಯಾ ಕೂಡಲಸಂಗಮದೇವಾ ನೀ ಬಾಣನ ಬಾಗಿಲ ಕಾದಂತಹದಯ್ಯಾ

ವಿಶ್ವಗುರು, ಭಕ್ತಿ ಭಂಡಾರಿ ಶ್ರೀ ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ವಚನವಾಗಿದೆ. ಈ ವಚನವು ನಿಜವಾದ ಶಿವಭಕ್ತಿಯ ಪರಮಾವಧಿ ಹಾಗೂ ಅದರ ಸ್ವರೂಪ ಎಂತಹದ್ದು ಎಂಬುದನ್ನು ಉದಾಹರಣೆಗಳ ಮೂಲಕ ಸುಂದರವಾಗಿ ವಿವರಿಸುತ್ತದೆ.

ನಿಜವಾದ ಭಕ್ತಿ ಅಂದರೆ ಏನು? ಅದು ಕೇವಲ ತೋರಿಕೆಯ ಪೂಜೆಯಲ್ಲ, ಬದಲಿಗೆ ಭಗವಂತನಿಗಾಗಿ ತನ್ನ ಅತ್ಯಂತ ಪ್ರೀತಿಯ ವಸ್ತುವನ್ನೇ ಸಮರ್ಪಿಸುವ ನಿಷ್ಕಲ್ಮಶ ತ್ಯಾಗದ ಮನೋಭಾವ ಎಂದು ಬಸವಣ್ಣನವರು ಶಿವಶರಣರ ಕಥೆಗಳ ಮೂಲಕ ಇಲ್ಲಿ ತಿಳಿಸಿದ್ದಾರೆ.

ದಾಸಯ್ಯ ಮಾಡಿದಂತಹದಯ್ಯ. ದಾಸಯ್ಯ ಎಂಬ ಶಿವಶರಣ-ರು ಹಸಿವಿನಿಂದ ಬಂದ ಜಂಗಮರಿಗೆ ಶಿವಭಕ್ತರಿಗೆ ಅನ್ನದಾಸೋಹ ಮಾಡಲು ತನ್ನ ಪ್ರಾಣಕ್ಕಿಂತ ಪ್ರೀತಿಯಾಗಿದ್ದ ಹೆಂಡತಿಯನ್ನೇ ಒಡ್ಡಲು ಸಿದ್ಧರಾಗಿದ್ದರು. ಅವರ ನಿಶ್ಚಲ ಭಕ್ತಿ ಇದಾಗಿತ್ತು.

ಸಿರಿಯಾಳ ಮಾಡಿದಂತಹದಯ್ಯ. ಸಿರಿಯಾಳ ಚಾಂಗಳಿಚಿಟಜ ಶರಣರು ಶಿವನ ಪರೀಕ್ಷೆಗೆ ಒಡ್ಡಿ, ಜಂಗಮ ವೇಷದಲ್ಲಿ ಬಂದ ಶಿವನಿಗೆ ಆಹಾರ ನೀಡಲು ತನ್ನ ಏಕೈಕ ಮಗನಾದ ಸಿರಾಳನನ್ನೇ ಕತ್ತರಿಸಿ ಅಡುಗೆ ಮಾಡಲು ಹಿಂಜರಿಯಲಿಲ್ಲ. ಇದು ಭಕ್ತಿಯ ಪರಮಾವಧಿ ತ್ಯಾಗವನ್ನು ತೋರಿಸುತ್ತದೆ.

ನಮ್ಮ ಬಲ್ಲಾಳ ಮಾಡಿದಂತಹದಯ್ಯ. ಸಿಂಧು ಬಲ್ಲಾಳ ಮಹಾರಾಜನು ತನ್ನ ಮನೆಗೆ ಬಂದ ಜಂಗಮರ ಆಸೆಯನ್ನು ಈಡೇರಿಸಲು ತನ್ನ ಪ್ರೀತಿಯ ಹೆಂಡತಿಯನ್ನೇ ಜಂಗಮರ ಸೇವೆಗೆ ಒಪ್ಪಿಸಲು ಮುಂದಾಗಿದ್ದನು.


ನೀ ಬಾಣನ ಬಾಗಿಲ ಕಾದಂತಹದಯ್ಯ. ಭಕ್ತನು ಈ ರೀತಿಯ ಅಪ್ರತಿಮ ಭಕ್ತಿಯನ್ನು ತೋರಿದಾಗ, ಸ್ವಯಂ ಭಗವಂತನೇ ಕೂಡಲಸಂಗಮದೇವನು ಆ ಭಕ್ತನಿಗೆ ವಶನಾಗುತ್ತಾನೆ. ಇದಕ್ಕೆ ಉದಾಹರಣೆಯಾಗಿ ಬಾಣಾಸುರನ ಭಕ್ತಿಗೆ ಮೆಚ್ಚಿ ಈಶ್ವರನು ಅವನ ಅರಮನೆಯ ದ್ವಾರಪಾಲಕನಾಗಿ ಬಾಗಿಲು ಕಾಯುವಂತೆ ಭಕ್ತನಿಗೆ ದಾಸನಾಗುತ್ತಾನೆ ಎಂದು ಬಸವಣ್ಣನವರು ವರ್ಣಿಸಿದ್ದಾರೆ. ವಿಶ್ವಗುರು ಬಸಣ್ಣನವರ ಈ ವಚನ ನಮಗೂ ನಿಮಗೂ ದಾರಿದೀಪವಾಗಲಿ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

ಶೇ.95ರಷ್ಟು ಪೆಟ್ರೋಲ್ ಬಂಕ್‌ಗಳಲ್ಲಿ ಭಾರೀ ಮೋಸ..!, ಸಚಿವರೇ ಬಿಚ್ಚಿಟ್ಟ ಶಾಕಿಂಗ್ ವಿಚಾರ..!

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು:ರಾಜ್ಯದಲ್ಲಿಸಮೀಕ್ಷೆನಡೆದಿರುವಬಂಕ್‌ಗಳಪೈಕಿಶೇ.95ರಷ್ಟರಲ್ಲಿ ಕರಾರುವಕ್ಕಾದ ಪೆಟ್ರೋಲ್, ಡಿಸೇಲ್ ಹಾಕಲಾಗುತ್ತಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಿಜ್ವಾನ್ ಅರ್ಷದ್ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದ ಅವರು, ರಾಜ್ಯದಲ್ಲಿರುವ 5946 ಬಂಕ್ ಗಳ ಪೈಕಿ ಮಾಪನ ಶಾಸ್ತ್ರ ಇಲಾಖೆ 805 ಬಂಕ್ ಗಳಲ್ಲಿ ಪರಿಶೀಲನೆ ನಡೆಸಿದೆ. ಅದರಲ್ಲಿ 768 ಬಂಕ್ ಗಳಲ್ಲಿ ತೈಲದ ಅಳತೆಯಲ್ಲಿ ವ್ಯತ್ಯಾಸ ಕಂಡುಬಂದಿದೆ ಎಂದು ಹೇಳಿದರು. ಅವುಗಳ ಪೈಕಿ 101ಪೆಟ್ರೋಲ್ ಬಂಕ್‌ಗಳಲ್ಲಿ ಅನುಮತಿಸಬಹುದಾದ ಪರಿಮಾಣಕ್ಕಿಂತಲೂ ಹೆಚ್ಚಿನ ವ್ಯತ್ಯಾಸಗಳು ಕಂಡು ಬಂದ ಹಿನ್ನೆಲೆಯಲ್ಲಿ, ದಂಡ ವಿಧಿಸಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದರು. ತೈಲವನ್ನು ಲೀಟರ್ ಮೂಲಕ ಅಳೆಯುವಾಗ ಈ ಬಂಕ್ ಗಳಲ್ಲಿ ವ್ಯತ್ಯಾಸ ಕಂಡುಬಂದಿದೆ. ನಿಗದಿತ ನಿಖರ ಅಳತೆ ಪತ್ತೆ ಹಚ್ಚಲು ನಮ ಇಲಾಖೆ ಪರಿಶೀಲನೆ ನಡೆಸಿದೆ. ಪೆಟ್ರೋಲ್ ಪೂರೈಕೆ ಗನ್‌ಗಳಲ್ಲೂ ದೋಷ ಕಂಡುಬಂದಿದ್ದು, 805 ಬಂಕ್ ಗಳಲ್ಲಿ 3071 ಪೆಟ್ರೋಲ್, ಡಿಸೇಲ್ ಹಾಕುವ ನಾಜೋಲ್ ಗಳಿವೆ, ಅವುಗಳಲ್ಲಿ 2618 ನಾಜೋಲ್ ಗಳಲ್ಲಿ ಕಡಿಮೆ ಪ್ರಮಾಣದ ಇಂಧನ ಹಾಕಲಾಗುತ್ತಿದೆ. ಈ ಬಗೆಗೂ ಕ್ರಮ ಜರುಗಿಸಲಾಗುತ್ತಿದೆ. ನಿಯಮಗಳ ಪ್ರಕಾರ ಈ ವ್ಯತ್ಯಾಸದ ಬಗ್ಗೆ ಗ್ರಾಹಕರು ಇಲಾಖೆಗೆ ದೂರು ನೀಡಬೇಕು ಎಂದು ಅವರು ಹೇಳಿದರು. ಶೇ.95 ರಷ್ಟು ನಾಜಲ್‌ಗಳಲ್ಲಿ ಸಮರ್ಪಕ ಪೆಟ್ರೋಲ್ ಪೂರೈಕೆ ಆಗುತ್ತಿಲ್ಲ. ಹೀಗಾಗಿ ಗ್ರಾಹಕನ ಹಕ್ಕಿಗೆ ನ್ಯಾಯ ಒದಗಿಸುವ ಕಾರ್ಯವನ್ನು ಇಲಾಖೆ ಮಾಡಲು ಹೊರಟಿದೆ. 2025ರ ಡಿಸೆಂಬರ್ 18 ರಂದು ಕೇಂದ್ರ ಸರ್ಕಾರ ಹೊರಡಿಸಿದ ಆದ-ೇಶದಂತೆ ಈ ಕೆಲಸ ಮಾಡಲಾಗಿದೆ. ವರ್ಷಕ್ಕೊಮ್ಮೆ ತೈಲ ಪೂರೈಕೆ ಸಾಧನಗಳ ಪರಿಶೀಲನೆ ಮಾಡಲು ಸೂಚಿಸಿತ್ತು. ಇಲಾಖೆಯಿಂದ ತೈಲ ನಷ್ಟದ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಕಳೆದ ಜನವರಿಯಿಂದ ಪರಿಶೀಲನಾ ಕಾರ್ಯವನ್ನು ಕಡ್ಡಾಯ ಮಾಡಲು ಸೂಚಿಸಲಾಗಿದೆ.

ತುಳಸಿ ಕ್ರೆಡಿಟ್ ಸಹಕಾರಿಗೆ 4.61 ಲಕ್ಷ ನಿವ್ವಳ ಲಾಭ

ಮಸ್ಕಿ: ಉತ್ತಮ ಗ್ರಾಹಕರ ಸಹಕಾರ, ಸಿಬ್ಬಂದಿ ಶ್ರಮದಿಂದ ಆರ್ಥಿಕ ಪ್ರಗತಿ: ಭರತಕುಮಾರ

❏ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದ ತುಳಸಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 4ನೇ ವಾರ್ಷಿಕ ಸಾಮಾನ್ಯ ಮಹಾಸಭೆ ಇತ್ತೀಚೆಗೆ ನಡೆಯಿತು.

ಸಹಕಾರಿಯ ಅಧ್ಯಕ್ಷ ಭರತಕುಮಾರ ಅಧ್ಯಕ್ಷತೆ ವಹಿಸಿ ಮಾತನಾಡಿ, 2025?26ನೇ ಸಾಲಿನಲ್ಲಿ ಸಹಕಾರಿ ಸಂಘವು ?4,61,063 ನಿವ್ವಳ ಲಾಭ ಗಳಿಸಿದೆ. ಠೇವಣಿ ಸಂಗ್ರಹಣೆ, ಸಾಲ ವಿತರಣೆ ಹಾಗೂ ಸಾಲ ವಸೂಲಾತಿಯಲ್ಲಿ ಉತ್ತಮ ಪ್ರಗತಿ ಸಾಧಿಸಲಾಗಿದೆ. ಗ್ರಾಹಕರು ನಡೆಸಿದ ವಹಿವಾಟು ಹಾಗೂ ಸಾಲವನ್ನು ಸಕಾಲದಲ್ಲಿ ಮರುಪಾವತಿಸಿರುವುದು ಸಹಕಾರಿಯ ಆರ್ಥಿಕ ಬೆಳವಣಿಗೆಗೆ ಪ್ರಮುಖ ಕಾರಣವಾಗಿದೆ. ಆಡಳಿತ ಮಂಡಳಿಯ ಮಾರ್ಗದರ್ಶನದೊಂದಿಗೆ ಸಿಬ್ಬಂದಿಯ ಪರಿಶ್ರಮವೂ ಇದಕ್ಕೆ ಸಹಕಾ-ರಿಯಾಗಿದೆ ಎಂದು ಹೇಳಿದರು.



ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಸಾದ ಜಿ. ವಾರ್ಷಿಕ ವರದಿ ಮಂಡಿಸಿ, ಉತ್ತಮ ಗ್ರಾಹಕರ ಸಹಕಾರ, ಆಡಳಿತ ಮಂಡಳಿಯ ಮಾರ್ಗದರ್ಶನ ಹಾಗೂ ಸಿಬ್ಬಂದಿಯ ಕಾರ್ಯದಕ್ಷತೆಯಿಂದ ಸಹಕಾರಿ ಉತ್ತಮ ರೀತಿಯಲ್ಲಿ ಮುನ್ನಡೆಯುತ್ತಿದೆ ಎಂದರು.

ಉಪಾಧ್ಯಕ್ಷ ಬಸವರಾಜ ಬುಕ್ಕಣ್ಣ, ನಿರ್ದೇಶಕರಾದ ರಮೇಶ ಪಟೇಲ್, ವಿಜಯಕುಮಾರ ಮೋಹನಲಾಲ್, ರಂಜಿತ್ ಸಿಂಗ್, ಮಂಜುನಾಥ ಉಪ್ಪಾರ, ಮನೋಜ್ ಎಂ., ವಿಜಯಕುಮಾರ ಕುಂಬಾರ, ಪ್ರವೀಣಕುಮಾರ ತೋಲಚಂದ್, ಜಾಫರ್‌ಮಿಯಾ, ಬಸವರಾಜ ವಿ., ಶರಣಬಸವ ಅಪರಂಜಿ, ನಂದೀಶ ಕಾರಮಂಗಿ, ಸುರೇಖಾ ಭರತಕುಮಾರ, ಲತಾ ಬಸವರಾಜ ಚನ್ನಿ ಸೇರಿದಂತೆ ನಿರ್ದೇಶಕರು, ಸಿಬ್ಬಂದಿ ಹಾಗೂ ಏಜೆಂಟರು ಉಪಸ್ಥಿತರಿದ್ದರು.

ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನೂತನ ಜಿಲ್ಲಾಧ್ಯಕ್ಷರುಗಳ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ, ಸಿದ್ದರಾಮಯ್ಯ ಬಾಗಿ ಪಕ್ಷ ಸಂಘಟನೆಗೆ ಶ್ರಮಿಸುವಂತೆ ನೂತನ ಜಿಲ್ಲಾಧ್ಯಕ್ಷರು ಗಳಿಗೆ ಸಲಹೆ

❏ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಸೆಪ್ಟೆಂಬರ್ 16ಪ್ರದೇಶ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನೂತನ ಜಿಲ್ಲಾಧ್ಯಕ್ಷರುಗಳ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ, ಸಿದ್ದರಾಮಯ್ಯ ಬಾಗಿ ಪಕ್ಷ ಸಂಘಟನೆಗೆ ಶ್ರಮಿಸುವಂತೆ ನೂತನ ಜಿಲ್ಲಾಧ್ಯಕ್ಷರು ಗಳಿಗೆ ಸಲಹೆ ನೀಡಿ ತಳಮಟ್ಟದಿಂದ ಪಕ್ಷ ಸಂಘಟನೆಗೆ ಹೆಚ್ಚು ಗಮನಹರಿಸಿ ಸರ್ಕಾರದ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಸರಿಯಾಗಿ ತಲುಪಿಸುವಂತೆ ನೋಡಿಕೊಳ್ಳಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೂತನ ಜಿಲ್ಲಾಧ್ಯಕ್ಷರು ಗಳಿಗೆ ಸೂಚನೆ ನೀಡಿದರು ಬೆಂಗಳೂರಿನ ಕಾಂಗ್ರೆಸ್ ಪಕ್ಷದ ಕಚೇ-ರಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ರಾಜ್ಯದ ಮೈಸೂರು ಮೈಸೂರು ಜಿಲ್ಲೆಯ ನೂತನ ಅಧ್ಯಕ್ಷರು ಹಾಗೂ ನಗರಾಧ್ಯಕ್ಷರು ಸೇರಿದಂತೆ ಎಲ್ಲಾ ಜಿಲ್ಲೆಯ ನೂತನವಾಗಿ ಆಯ್ಕೆಯಾಗಿರುವ ಜಿಲ್ಲಾಧ್ಯಕ್ಷರುಗಳು ನಾಗರ ಅಧ್ಯಕ್ಷರುಗಳು ಹಾಗೂ ಪಟ್ಟಣ ಪಂಚಾಯತಿಯ ಅಧ್ಯಕ್ಷರುಗಳು ಈ ಸಮಾರಂಭದಲ್ಲಿ ಭಾಗಿಯಾಗಿದ್ದರು ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯರಾದ ಸಿದ್ದರಾಮಯ್ಯ ಅವರು ಭಾಗವಹಿಸಿದ್ದರು.




ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ. ಹ-ರಿಪ್ರಸಾದ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಪಕ್ಷದ ಹಿರಿಯ ನಾಯಕರುಗಳು ಮುಖಂಡರು ಈ ಸಭೆಗೆ ಸಾಕ್ಷಿಯಾದರು

ಅಮೆರಿಕದ ಒತ್ತಡಕ್ಕೆ ಮಣಿದು UPI ಬಳಕೆ ಮೇಲೆ ತೆರಿಗೆ ಹೇರಿಕೆ ; ಕಾಂಗ್ರೆಸ್ ಆರೋಪ

❏ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಶೂನ್ಯ ಎಂಡಿಆರ್ (ಮರ್ಚೆಂಟ್ ಡಿಸ್ಕೌಂಟ್ ರೇಟ್) ನೀತಿಯನ್ನು ಕೈಬಿಟ್ಟು ಯುಪಿಐ ವಹಿವಾಟುಗಳಿಗೆ ಶುಲ್ಕ ವಿಧಿಸುವಂತೆ ಅಮೆ-ರಿಕ ಮಾಡಿದ ಬೇಡಿಕೆಗೆ ಕೇಂದ್ರ ಸರ್ಕಾರ ಮಣಿದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಯುಪಿಐ ಜೊತೆ ಸ್ಪರ್ಧಿಸಲು ಅಮೆರಿಕದ ಕಾರ್ಡ್ ಕಂಪನಿಗಳಿಗೆ ಅನುಕೂಲವಾಗುವಂತೆ ಮರ್ಚೆಂಟ್ ಡಿಸ್ಕೌಂಟ್ ರೇಟ್‌ಗೆ ಸಂಬಂಧಿಸಿದಂತೆ ಸರ್ಕಾರ ಈ ಕ್ರಮ ಕೈಗೊಂಡಿದೆಯೇ ಎಂದು ಕಾಂಗ್ರೆಸ್‌ನ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ಭಾರತದ ಮೇಲೆ ಶೇ.100ರಷ್ಟು ಸುಂಕ ವಿಧಿಸುವ ಮಸೂದೆಯೊಂದರ ಕು-ರಿತು ಅಮೆರಿಕದ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್ (ಪ್ರತಿನಿಧಿಗಳ ಸಭೆ) ನಾಳೆ ಮತದಾನ ನಡೆಸಲಿದೆ ಎಂದು ಅವರು ಹೇಳಿದ್ದಾರೆ. ಈ ಕಠಿಣ ಕಾನೂನಿಗೆ ಅಮೆರಿಕದ ಸೆನೆಟ್ ಈಗಾಗಲೇ ಅನುಮೋದನೆ



ನೀಡಿದೆ ಎಂಬುದನ್ನೂ ಅವರು ಉಲ್ಲೇಖಿಸಿದ್ದಾರೆ. ಟ್ರಂಪ್ ಆಡಳಿತವು ಭಾರತೀಯ ವಲಸಿಗರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಅವರ ವಿರುದ್ಧ ಕಠಿಣ ಕಾನೂನುಗಳನ್ನು ಜಾರಿಗೆ ತರುತ್ತಿದೆ ಎಂದು ರಮೇಶ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಎಚ್-1ಬಿ ವೀಸಾ ವೆಚ್ಚವನ್ನು ಹೆಚ್ಚಿಸಲಾಗಿದ್ದು, ಅಂತಹ ವೀಸಾ ಹೊಂದಿರುವವರು ಉದ್ಯೋಗ ಕಳೆದುಕೊಂಡರೆ ತಕ್ಷಣವೇ ಅವರನ್ನು ದೇಶದಿಂದ ಹೊರಹಾಕುವ ಸಾಧ್ಯತೆಯಿದೆ ಎಂದು ಅವರು ಹೇಳಿದ್ದಾರೆ. ಎಚ್-1ಬಿ ವೀಸಾ ಹೊಂದಿರುವವರಲ್ಲಿ ಹೆಚ್ಚಿನವರು ಐಟಿ (ಮಾಹಿತಿ ತಂತ್ರಜ್ಞಾನ) ವೃತ್ತಿಪರರಾಗಿದ್ದಾರೆ ಎಂದು ಅವರು ಉಲ್ಲೇಖಿಸಿದ್ದಾರೆ. ಶೂನ್ಯ ಎಂಡಿಆರ್ ನೀತಿಯನ್ನು ಕೈಬಿಟ್ಟು ಯುಪಿಐಗೆ ಶುಲ್ಕ ವಿಧಿಸುವ ಅಮೆರಿಕದ ಬೇಡಿಕೆಗೆ ಮೋದಿ ಸರ್ಕಾರ ಮಣಿದಿದೆ ಎಂದು ರಮೇಶ್ ಆರೋಪಿಸಿದ್ದಾರೆ. ಯುಪಿಐ ಉಚಿತವಾಗಿರುವುದರಿಂದ ಹಾಗೂ ವೀಸಾ ಮತ್ತು ಮಾಸ್ಟರ್‌ಕಾರ್ಡ್‌ಗಳನ್ನು ಮಾರುಕಟ್ಟೆಯಿಂದ ಹೊರಹಾಕಿದೆ ಎಂಬ ಕಾರಣಕ್ಕೆ ಅಮೆರಿಕದ ವ್ಯಾಪಾರ ಪ್ರತಿನಿಧಿಯು ಈ ವರ್ಷದ ಆರಂಭದಲ್ಲಿ ಯುಪಿಐ ಅನ್ನು ಟೀಕಿಸಿದ್ದರು ಎಂದು ಅವರು ಹೇಳಿದ್ದಾರೆ.

"ಶೇ.0.4ರಷ್ಟು ಎಂಡಿಆರ್ ಏಕೆ? ಡೆಬಿಟ್ ಕಾರ್ಡ್ ಎಂಡಿಆರ್ ಕೂಡ ಶೇ.0.4ರಷ್ಟು ಇರುವುದರಿಂದಲೇ ಹೀಗೆ ಮಾಡಲಾಗಿದೆಯೇ? ಯುಪಿಐ ಜೊತೆ ಸ್ಪರ್ಧಿಸಲು ಅಮೆರಿಕದ ಕಾರ್ಡ್ ಕಂಪನಿಗಳಿಗೆ ಅನುಕೂಲವಾಗುವಂತೆ ಇದನ್ನು ಮಾಡಲಾಗುತ್ತಿದೆಯೇ?" ಎಂದು ಅವರು ಪ್ರಶ್ನಿಸಿದ್ದಾರೆ. ಸರ್ಕಾರ ಹೇಳಿಕೊಳ್ಳುವಂತೆ ಈ ಕ್ರಮ ಯುಪಿಐ ವ್ಯವಸ್ಥೆಯನ್ನು ಸುಸ್ಥಿರವಾಗಿಸುತ್ತದೆಯೇ ಎಂದೂ ರಮೇಶ್ ಪ್ರಶ್ನಿಸಿದ್ದಾರೆ. ಸಂಪೂರ್ಣ ಯುಪಿಐ ವ್ಯವಸ್ಥೆಯನ್ನು ನಿರ್ವಹಿಸುವ ಅಂದಾಜು ವೆಚ್ಚ ವಾರ್ಷಿಕ ಸುಮಾರು ?20,000 ಕೋಟಿಯಷ್ಟಿದೆ ಎಂದು ರಮೇಶ್ ಹೇಳಿದ್ದಾರೆ. ಮೋದಿ ಸರ್ಕಾರದ ಸಾರ್ವಜನಿಕ ಹಣಕಾಸು ಸ್ಥಿತಿ ಉತ್ತಮವಾಗಿದೆ ಎಂದು ತೋರಿಸಲು ಕಳೆದ ಕೆಲವು ವರ್ಷಗಳಲ್ಲಿ ಆರ್‌ಬಿಐ ಕೇಂದ್ರ ಸರ್ಕಾರಕ್ಕೆ ವರ್ಗಾಯಿಸುತ್ತಿರುವ ಮೊತ್ತದ ಶೇ.10ಕ್ಕಿಂತಲೂ ಇದು ಕಡಿಮೆ ಎಂದು ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು 'ನೋಟಾ' ಪದಕ್ಕೆ 'ನರೇಂದ್ರ ಅವರ ನಿರಂತರ ಟ್ರಂಪ್ ಓಲೈಕೆ' ಎಂಬ ಹೊಸ ಅರ್ಥ ನೀಡಿದ್ದಾರೆ ಎಂದು ರಮೇಶ್ ವ್ಯಂಗ್ಯವಾಡಿದ್ದಾರೆ. ಅಕ್ಟೋಬರ್ 15ರಿಂದ ಯುಪಿಐ ಮೂಲಕ ವ್ಯಾಪಾರಿಗಳಿಗೆ ಮಾಡುವ ?2,000ಕ್ಕಿಂತ ಹೆಚ್ಚಿನ ಮೌಲ್ಯದ ವಹಿವಾಟುಗಳ ಮೇಲೆ ಶೇ.0.4ರಷ್ಟು ಶುಲ್ಕ ವಿಧಿಸುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿದ ಮರುದಿನವೇ ರಮೇಶ್ ಅವರ ಈ ಹೇಳಿಕೆಗಳು ಬಂದಿವೆ.

ಸರ್ಕಾರಕ್ಕೆ ಕಾಯಕಲ್ಪ ನೀಡಲು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳ ಸರಣಿ ಸಭೆ

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ರಾಜ್ಯ ಸರ್ಕಾರ ಮತ್ತು ಪಕ್ಷಕ್ಕೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಇಂದು ಬೆಂಗಳೂರಿನಲ್ಲಿ ಸರಣಿ ಸಭೆಗಳನ್ನು ನಡೆಸಿದ್ದಾರೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲ ಅವರು ಬೆಂಗಳೂರಿಗೆ ಆಗಮಿಸಿದ್ದು, ಬೆಳಗ್ಗೆ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷರುಗಳ ಜೊತೆ ಚರ್ಚೆ ನಡೆಸಿದ್ದಾರೆ. ಮಧ್ಯಾಹ್ನ ಎಸ್‌ಐಆರ್ ಬಗ್ಗೆ ಪ್ರಮುಖ ನಾಯಕರ ಜೊತೆ ಸಮಾಲೋಚನೆ ನಡೆದಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಗೆ ಭೇಟಿ ನೀಡಿ, ವರಿಷ್ಠ ನಾಯಕರನ್ನು ಭೇಟಿ ಮಾಡಿ ಕೆಲ ಮಾಹಿತಿ ವಿನಿಮಯ ಮಾಡಿಕೊಂಡಿದ್ದರು. ಅದರ ಬೆನ್ನಲ್ಲೇ ಪ್ರಧಾನ ಕಾರ್ಯದರ್ಶಿಗಳು ರಾಜ್ಯಕ್ಕಾಗಮಿಸಿರುವುದು ಗಮನ ಸೆಳೆದಿದೆ. ಖಾಲಿಯಿರುವ ಎರಡು ಸಚಿವ ಸ್ಥಾನಗಳಿಗೆ ನೇಮಕಾತಿ, ವಿಧಾನ ಪರಿಷತ್‌ನಲ್ಲಿ ತೆರವಾಗಿರುವ 5 ಸದಸ್ಯ ಸ್ಥಾನಗಳು ಹಾಗೂ ನಿಗಮ-ಮಂಡಳಿಗಳ ಅಧ್ಯಕ್ಷರ ಆಯ್ಕೆಗೆ ಈ ಸಂದರ್ಭದಲ್ಲಿ ಚರ್ಚೆ ನಡೆಸಲಾಗಿದೆ.

ನಿಗಮ-ಮಂಡಳಿಗಳಲ್ಲಿ ಎರಡೂವರೆ ವರ್ಷ ಪೂರ್ಣಗೊಂಡಿರುವವರು ರಾಜೀನಾಮೆ



ನೀಡಬೇಕು ಎಂದು ಈಗಾಗಲೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಚ್ಚರಿಕೆ ನೀಡಿದ್ದರು. ಆದ-ರೂ ಬಹುತೇಕರು ರಾಜೀನಾಮೆ ನೀಡಿಲ್ಲ. ಹೀಗಾಗಿ ಅವರಿಂದ ರಾಜೀನಾಮೆ ಪಡೆದು ಬೇರೆಯವರನ್ನು ನೇಮಿಸಲು ಕಾಂಗ್ರೆಸ್ ತಯಾರಿ ನಡೆಸಿದೆ. ಇಂದಿನ ಸಭೆಯಲ್ಲಿ ಈ ಕುರಿತು ಮಹತ್ವದ ಚರ್ಚೆಗಳಾಗಿವೆ. ನೂತನ ಜಿಲ್ಲಾಧ್ಯಕ್ಷರಿಗೆ ಮುಂದಿನ ದಿನಗಳಲ್ಲಿ ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಜ್ಜುಗೊಳ್ಳುವಂತೆ ಪಕ್ಷದ ವರಿಷ್ಠರು ಸೂಚನೆ ನೀಡಿದ್ದಾರೆ. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಸೇ-ರಿದಂತೆ ನಗರಸಭೆ, ಪುರಸಭೆ, ಪಾಲಿಕೆಗಳು, ಗ್ರೇಟರ್ ಬೆಂಗಳೂರು ಒಳಗೊಂಡಂತೆ ಹಲವು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಕಾಂಗ್ರೆಸ್‌ಗೆ ಪ್ರತಿಷ್ಠೆಯ ಕಣಗಳಾಗಿವೆ. ಅದೇ ರೀತಿ ಕಾಂಗ್ರೆಸ್ ಹಿರಿಯೂರು ವಿಧಾನಸಭೆಗೆ ನಡೆಯುವ ಉಪ ಚುನಾವಣೆ ಕೂಡ ಗೆಲ್ಲುವ ಪಣತೊಟ್ಟಿದೆ.

ಜಾಲಹಳ್ಳಿ ಸರ್ಕಾರಿ ಆಸ್ಪತ್ರೆ ಕೊರತೆಗಳ ವಿರುದ್ಧ DYFI ಧರಣಿ

ಮೂಲಸೌಕರ್ಯ, ವೈದ್ಯರು?ನರ್ಸಿಂಗ್ ಸಿಬ್ಬಂದಿ ಕೊರತೆ ಹಾಗೂ ಔಷಧ ಸಮಸ್ಯೆ: ಸ್ಥಳಕ್ಕೆ ಅಧಿಕಾರಿಗಳ ಭೇಟಿ, ಪರಿಶೀಲನೆ

❏ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, (ರಾಯಚೂರು): ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ವೈದ್ಯರು ಹಾಗೂ ನರ್ಸಿಂಗ್ ಸಿಬ್ಬಂದಿಯ ಕೊರತೆ, ಔಷಧಗಳ ಅಲಭ್ಯತೆ ಸೇ-ರಿದಂತೆ ವಿವಿಧ ಸಮಸ್ಯೆಗಳು ತಲೆದೋರಿದ್ದು, ಸಾರ್ವಜನಿಕರು ಹಾಗೂ ರೋಗಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ದೇವದುರ್ಗ ವಲಯ ಸಮಿತಿ ವತಿಯಿಂದ ಬುಧವಾರ ಆಸ್ಪತ್ರೆ ಎದುರು ಧರಣಿ ನಡೆಸಲಾಯಿತು.

ಆಸ್ಪತ್ರೆಯಲ್ಲಿ ರಾತ್ರಿ ವೇಳೆಯಲ್ಲಿ ವೈದ್ಯರು ಲಭ್ಯವಿರುವುದಿಲ್ಲ. ನರ್ಸಿಂಗ್ ಸಿಬ್ಬಂದಿಯ ಕೊರತೆಯಿಂದ ತುರ್ತು ಚಿಕಿತ್ಸೆಗಾಗಿ ಬರುವ ರೋಗಿಗಳು ಪರದಾಡುವಂತಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ದೊರೆಯಬೇಕಾದ ಔಷಧಗಳು ಲಭ್ಯವಿಲ್ಲದೆ,



ಹೊರಗಿನ ಮೆಡಿಕಲ್ ಶಾಪ್‌ಗಳಿಂದ ಔಷಧ ಖರೀದಿಸುವಂತೆ ಚೀಟಿ ಬರೆಯಲಾಗುತ್ತಿದೆ. ಅಲ್ಲದೆ, ಹೆರಿಗೆ ವಿಭಾಗದಲ್ಲಿಯೂ ಗರ್ಭಿಣಿಯರಿಂದ ಹಣ-ಕ್ಕೆ ಒತ್ತಾಯಿಸಲಾಗುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ ಎಂದು DYFI ಮುಖಂಡರು ತಿಳಿಸಿದರು.

ಈ ಕುರಿತು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಿಗೆ ಈಗಾಗಲೇ ಮನವಿ ಸಲ್ಲಿಸಲಾಗಿದ್ದು, ಬೇಡಿಕೆಗಳನ್ನು ತಕ್ಷಣ ಈಡೇ-ರಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಆಜಕಖ ಅಧ್ಯಕ್ಷ ಕೊಂಡಯ್ಯ ಗೋಸಲ್ ಹಾಗೂ ಕಾರ್ಯದರ್ಶಿ ವೆಂಕಟೇಶ ತ್ಯಾಪ್ಲಿ ಎಚ್ಚರಿಸಿದರು.

ಅಧಿಕಾರಿಗಳ ಭೇಟಿ ಧರಣಿ ಸ್ಥಳಕ್ಕೆ ಭೇಟಿ ನೀಡಿದ ತಾಲೂಕು ಆರೋಗ್ಯಾಧಿಕಾರಿ ಡಾ. ಬನದೇಶ್ವರ ಅವರು ಪ್ರತಿಭಟನಾಕಾರರ ಬೇಡಿಕೆಗಳನ್ನು ಆಲಿಸಿ, ಆಸ್ಪತ್ರೆಯಲ್ಲಿನ ಸಮಸ್ಯೆಗಳು ಹಾಗೂ ಬೇಡಿಕೆಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಾಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಆರ್.ಎಸ್. ಹುಲಮನಿಗೌಡ ಹಾಗೂ ಫಾರ್ಮಸಿ ಅಧಿಕಾರಿ ವೀರೇಶ್ ದೇವದುರ್ಗ ಉಪಸ್ಥಿತರಿದ್ದರು. ಧರಣಿಯಲ್ಲಿ ರಾಜ್ಯ ಕಾರ್ಮಿಕ ಸಂಘಟನೆ ಮುಖಂಡ ಶಬ್ಬೀರ್ ಜಾಲಹಳ್ಳಿ, ಜಿಲ್ಲಾ ಅಧ್ಯಕ್ಷ ರಾಜು ನಾಯಕ, ತಾಲೂಕು ಅಧ್ಯಕ್ಷ ರಿಯಾಜ್ ಆರ್ತಿ, ಮಲ್ಲುಗೌಡ, ತಿಮ್ಮಣ್ಣ ಬೆಂಗಂಡಿ, ಲೋಹಿತ್ ಮೋದಿ, ಉಪಾಧ್ಯಕ್ಷ ರಿಯಾಜ್ ಖುರೇಷಿ, ಮೈಹಿಬೂಬ್ ಖುರೇಷಿ, ರಾಜ್ ಮಹ್ಮದ್ ಟಕೆದ್, ಮಹಾಲಿಂಗ ದೊಡ್ಮನಿ, ರೈತ ಮುಖಂಡ ಶಿವರಾಜ ನಡಿಗೇರ್, ಮೌನೇಶ ದಾಸರ, ಹನುಮಂತ ಮಡಿವಾಳ, ದುರಗಪ್ಪ ಹೊರಟಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮನವಿಯ ಪ್ರತಿಗಳನ್ನು ಆರೋಗ್ಯ ಸಚಿವರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಹಾಗೂ ತಾಲೂಕು ಆರೋಗ್ಯಾಧಿಕಾರಿಗಳಿಗೂ ರವಾನಿಸಲಾಗಿದೆ ಎಂದು ಆಜಕಖ ಮುಖಂಡರು ತಿಳಿಸಿದ್ದಾರೆ.

ಪ್ರಮುಖ ಬೇಡಿಕೆಗಳು

* ಆಸ್ಪತ್ರೆಯಲ್ಲಿ ಸಮರ್ಪಕ ಸ್ವಚ್ಛತೆ ಕಾಪಾಡಿ, ಅಗತ್ಯ ವೈದ್ಯರನ್ನು ತಕ್ಷಣ ನೇಮಿಸಬೇಕು.
* ಮಹಿಳಾ ವೈದ್ಯರನ್ನು ಕಡ್ಡಾಯವಾಗಿ ನಿಯೋಜಿಸಬೇಕು ಹಾಗೂ ರಾತ್ರಿ ವೇಳೆಯಲ್ಲಿ ಆನ್-ಡ್ಯೂಟಿ ವೈದ್ಯರ ವ್ಯವಸ್ಥೆ ಕಲ್ಪಿಸಬೇಕು.
* ಹೊರಗಿನ ಮೆಡಿಕಲ್ ಶಾಪ್‌ಗಳಿಗೆ ಔಷಧ ಬರೆದುಕೊಡುವುದನ್ನು ನಿಲ್ಲಿಸಿ, ಆಸ್ಪತ್ರೆಯಲ್ಲೇ ಉಚಿತ ಔಷಧ ದೊರೆಯುವಂತೆ ಮಾಡಬೇಕು.
* ಸ್ಥಗಿತಗೊಂಡಿರುವ ಆಮ್ಲಜನಕ ಘಟಕವನ್ನು ತಕ್ಷಣ ಪ್ರಾರಂಭಿಸಬೇಕು.
* ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರದ ವ್ಯವಸ್ಥೆ ಮಾಡಬೇಕು.
* ವಿದ್ಯುತ್ ಕಡಿತದ ಸಂದರ್ಭದಲ್ಲಿ ಪರ್ಯಾಯ ವಿದ್ಯುತ್‌ಗಾಗಿ ಜನರೇಟರ್ ವ್ಯವಸ್ಥೆ ಕಲ್ಪಿಸಬೇಕು.
* ಜನನಿ ಸುರಕ್ಷಾ ಯೋಜನೆಯಡಿ ಬಾಣಂತಿಯರಿಗೆ ನೀಡಬೇಕಾದ ಹಣವನ್ನು ತಕ್ಷಣ ವಿತರಿಸಬೇಕು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101